
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ದ್ವೈಮಾಸಿಕ ಪತ್ರಿಕೆ ಸಂಚಿಕೆ ೩೧, ಡಿಸೆಂಬರ್ ೨೦೨೦

# ಬೃಂದಾವನ ವಾಣಿ



## ಒಂದೇ ಗುರಿಯ ಕಡೆಗೆ ಪಯಣ !!

ಸಂಚಿಕೆ 31

ಡಿಸೆಂಬರ್ ೨೦೧೦

## ಈ ಸಂಚಿಕೆಯಲ್ಲಿ


ಸಂಪಾದಕೀಯ ............೩

ಅಧ್ಯಕ್ಷರ ನುಡಿ ............೪

ಭಾರತರತ್ನ ಪುರಸ್ಕೃತ ಕನ್ನಡಿಗರು .......... ೫

ವೈಕುಂಠ ಏಕಾದಶಿ............೧೦

ದೇವೀರಮ್ಮನ ದೀಪಾವಳಿ.......೧೨

ನನ್ನೊಂದಿಗೆ ನಿಂತ .......೧೩

ಕನ್ನಡ ರಾಜ್ಯೋತ್ಸವದ ಸಂಭ್ರಮ ......೧೪

ಕವನಗಳು .......೧೬

ಅಡುಗೆ –ಅಲೂಗಡ್ಡೆ ಮೊಸರು ಬಜ್ಜಿ.....೨೧

ಅಡುಗೆ– ಸಬ್ಬಕ್ಕಿ ವಡೆ ......೨೨

ಚಿಣ್ಣರ ಚಿತ್ರಗಳು....೨೩

ಛಾಯಾಚಿತ್ರಗಳು.....೨೬



**ಸಂಚಿಕೆ ವಿನ್ಯಾಸ ಮತ್ತು ಸಲಹೆ** –ಪ್ರಶಾಂತ್ ಮುರುಗೇಂದ್ರಪ್ಪ

**ಮುಖಪುಟ ಚಿತ್ರ: ಉಷಾ ಬಸ್ರೂರ್**

**ಕೃಪೆ : ಉಷಾ ಬಸ್ರೂರ್**

**ಅಂಕಣ ಚಿತ್ರಗಳ ಕೃಪೆ–ಲೇಖಕರು ಮತ್ತು ಅಂತರ್ಜಾಲ**



**ಬೃಂ**ದಾವನ ವಾಣಿಯ ಓದುಗರೆಲ್ಲರಿಗೂ ನಮಸ್ಕಾರಗಳು.

ಈ ವರ್ಷದ ಮಹದುತ್ಸಾಹವನ್ನು ನುಂಗಿ ನೀರು ಕುಡಿದ ಕೊರೋನಾ ಮಹಾಮಾರಿಯನ್ನು ಮತ್ತೊಮ್ಮೆ ನೆನೆಯುತ್ತಾ ಡಿಸೆಂಬರ್ ತಿಂಗಳಿನ ಈ ದ್ವೈಮಾಸಿಕ ಪತ್ರಿಕೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ಬೇಸಿಗೆಯ ಸಮಯದಲ್ಲಿ ಕಡಿಮೆಯಾದಂತೆ ತೋರಿ ಮತ್ತೆ ಈ ಫಾಲ್ ವಾತಾವರಣದಲ್ಲಿ ಎಲ್ಲ ಕಡೆಗೆ ತೀವ್ರವಾಗಿ ಬೆಳೆಯುತ್ತಿರುವ ಈ ಮಹಾಮಾರಿ ಆದಷ್ಟು ಬೇಗ ಕಡಿಮೆಯಾಗಲಿ. ಮುಂದೆ ಲಸಿಕೆಗಳು ಬಿಡುಗಡೆಯಾದಂತೆ ನಮ್ಮೆಲ್ಲರ ಜೀವನೋತ್ಸಾಹ ಮುಂದಿನ ವರ್ಷದಲ್ಲಿ ಎಂದಿನಂತಾಗಲಿ ಎನ್ನುವುದು ನಮ್ಮ ಹಾರೈಕೆ.

ಈ ವರ್ಷದ ಉದ್ದಕೂ ಜನಜೀವನವನ್ನು ಒಂದಲ್ಲ ಒಂದು ರೀತಿಯಲ್ಲಿ ಅಸ್ತವ್ಯಸ್ತಗೊಳಿಸಿದ ಕೀರ್ತಿ ಕೊರೋನಾ ಮಹಾಮಾರಿಗೆ ಸಲ್ಲುತ್ತದೆ. ಸುಮಾರು ನೂರು ವರ್ಷಗಳಿಗೊಮ್ಮೆ ಭುಗಿಲೇಳುವ ಈ ರೀತಿಯ ಮಹಾಮಾರಿಗಳ ಪ್ರಭಾವ ಈ ಬಾರಿ ಎಲ್ಲಕ್ಕಿಂತ ಹೆಚ್ಚು. ಈ ಮಹಾಮಾರಿಯಿಂದ ಅನೇಕ ಸಾವು-ನೋವುಗಳು ದಾಖಲಾದವು, ಅನೇಕ ಉದ್ಯಮಗಳು ನೆಲಕಚ್ಚಿದವು. ಇನ್ನು ಕೆಲವು ಕ್ಷೇತ್ರಗಳಲ್ಲಿ ಮುಂದೆಂದೂ ತಲೆ ಎತ್ತಿ ನಿಲ್ಲದಂತ ಹೊಡೆತಗಳನ್ನು ಅನುಭವಿಸಬೇಕಾಯಿತು. ಈ ನಡುವೆ, ಅಮೇರಿಕದಲ್ಲಿ ಚುನಾವಣೆಗಳು ನಡೆದು ಮುಂದಿನ ಹೊಸ ಆಡಳಿತ ವ್ಯವಸ್ಥೆಯೂ ಬರುವಂತಾಗಿರುವುದು ವಿಶೇಷ. ಆದರೆ, ವಿಶ್ವದೆಲ್ಲೆಡೆ ವಿಜ್ಞಾನಿಗಳು ತಮ್ಮ ಶೋಧನೆಗಳನ್ನು ಬಹಳಷ್ಟು ಚುರುಕಾಗಿ ನಡೆಸಿ, ಮಾನವ ನಿರ್ಮಿತ ಲಸಿಕೆ-ಔಷಧಿಗಳು ಆದಷ್ಟು ಬೇಗ ಎಲ್ಲ ಕಡೆಗೆ ಸರಬರಾಜು ಆಗುವುದರ ಮೂಲಕ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿರುವುದು ಸಂತೋಷ ತರುವ ವಿಚಾರ. ಈ ನಿಟ್ಟಿನಲ್ಲಿ ಮುಂಬರುವ ಚಳಿಗಾಲದ ದಿನಗಳಲ್ಲಿ ಹೆಚ್ಚಿನ ಜನರಿಗೆ ಈ ಲಸಿಕೆಗಳು ದೊರಕುವುದರ ಮೂಲಕ ಒಂದಿಷ್ಟು ಶಾಂತಿ ನೆಲಸಬಹುದು. ಏನಿಲ್ಲವೆಂದರೂ ಈ ಸೋಂಕು ಹರಡುವ ಪ್ರಮಾಣದಲ್ಲಾದರೂ ಕಡಿಮೆ ಆಗಬಹುದೆಂಬುದು ನಮ್ಮೆಲ್ಲರ ನಂಬಿಕೆ.

ಒಂದು ಕಡೆಗೆ ಕೊರೋನಾ ಮಾರಿಯಿಂದ ತಲ್ಲಣಗೊಂಡ ಜನರಿಗೆ, ಗಾಯದ ಮೇಲೆ ಉಪ್ಪು ಸವರುವಂತೆ, ಈ ವರ್ಷ ಒಂದರ ಮೇಲೊಂದರಂತೆ ಅನೇಕ ತೊಂದರೆಗಳನ್ನು ಎದುರಿಸುವಂತಾಯಿತು. ಹೆಚ್ಚಿದ ನಿರುದ್ಯೋಗ, ನೆಲಕಚ್ಚಿದ ಉದ್ಯಮಗಳು, ಉದ್ಯಮಗಳನ್ನು ನಂಬಿ ಬೆಳೆಯಬಹುದಾದ ಉಪ ಉದ್ಯಮಗಳು, ಆಹಾರ ಪೂರೈಕೆಯಲ್ಲಿನ ವ್ಯತ್ಯಯ, ಅತಿವೃಷ್ಟಿ ಮತ್ತು ಬೆಂಕಿಗೆ ಆಹುತಿಯಾದ ಕಾಡು-ನಾಡು, ಒಂದೇ ಎರಡೇ... ಇನ್ನೂ ಅನೇಕಾನೇಕ ತೊಂದರೆಗಳನ್ನು ಅನುಭವಿಸುವಂತಾಯಿತು. ಆದರೆ, ಇದೇ ಸಮಯದಲ್ಲಿ, ನಮ್ಮ ವ್ಯವಹಾರ ವಹಿವಾಟುಗಳು, ಶಾಲಾ-ಕಾಲೇಜು, ಆಫೀಸು ಮೊದಲಾದವುಗಳೆಲ್ಲ ವರ್ಚುವಲ್ ಮಾಧ್ಯಮದಲ್ಲೇ ನಡೆಯುವಂತಾಗಿ ಎಲ್ಲ ಕಡೆಗೆ ಹೊಸದಾದ ಬದುಕುವ ರೀತಿಯೊಂದು ತನ್ನಷ್ಟಕ್ಕೆ ತಾನೇ ತೆರೆದುಕೊಂಡಿತು. ಮೊದಮೊದಲು ಇವೆಲ್ಲ ಕಷ್ಟವೆಂದು ಕರೆದುಕೊಳ್ಳುತ್ತಿದ್ದ ನಾವೆಲ್ಲ ಈ ಹೊಸದಕ್ಕೆ ಈಗಾಗಲೇ ಒಗ್ಗಿಕೊಂಡಿದ್ದೇವೆ. ಜೊತೆಗೆ, ದೂರವಿದ್ದ ಅನೇಕರು ಈ ಕೊರೋನಾ ಮಹಾಮಾರಿಯ ಸಲುವಾಗಿ ಹತ್ತಿರ ಬಂದಿದ್ದೇವೆ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ನಮ್ಮ ಕರೆಗೆ ಓಗೊಟ್ಟು ಈ ರಜಾ ದಿನಗಳಲ್ಲಿ ಬೃಂದಾವನ ವಾಣಿಗೆ ಲೇಖನ ಮತ್ತು ಚಿತ್ರಗಳನ್ನು ಕಳುಹಿಸಿದ ಎಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಈ ಸಂಚಿಕೆಯಲ್ಲಿ ಅನೇಕ ಸುಂದರವಾದ ಚಿತ್ರಗಳನ್ನು ಸೇರಿಸಿದ್ದೇವೆ, ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಕವಿತೆಗಳನ್ನೂ ಸಹ ಪೋಣಿಸಿದ್ದೇವೆ. ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆ ಎಂದು ನಂಬಿದ್ದೇವೆ. ಇದನ್ನು ನಿಮ್ಮ ಬಂಧು-ಮಿತ್ರರೊಡನೆ ಹಂಚಿಕೊಳ್ಳಿ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.



**ಸತೀಶ್ ಹೊಸನಗರ**


**ಸಂಪಾದಕ ಮಂಡಳಿ:**

**ದಾಶರಥಿ ಘಟ್ಟು, ಅಜೇಯ ರಾವ್, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ, ಲಕ್ಷ್ಮಿ ಕೊಲಾಳ್, ಪ್ರಶಾಂತ್ ಶ್ರೀನಿವಾಸ್**






ಬೃಂದಾವನ ಕನ್ನಡ ಬಂಧುಗಳಿಗೆ ನಮಸ್ಕಾರಗಳು.

ಈ ವರ್ಷ ಪೂರ್ತಿ, ಕೆಲವೊಂದು ಸಮಾರಂಭಗಳನು ಹೊರತುಪಡಿಸಿ, ಉಳಿದೆಲ್ಲ ಕಾರ್ಯಕ್ರಮವನ್ನೂ ವರ್ಚುವಲ್ ಮಾದರಿಯಲ್ಲಿ ನಡೆಸಿಕೊಂಡು ಬಂದು ಒಂದು ಹೊಸ ದಾಖಲೆಯನ್ನೇ ಸೃಷ್ಟಿಸಿದೆವು. ಮಾರ್ಚ್ ತಿಂಗಳ ಕೊರೋನಾ ಮಹಾಮಾರಿಯ ಭೀತಿಯ ನೆರಳಿನಲ್ಲಿ ಆರಂಭವಾದ ನಮ್ಮ ವರ್ಚುವಲ್ ಕಾರ್ಯಕ್ರಮಗಳು ಈ ವರ್ಷದ ಕೊನೆಯ ವರೆಗೆ 35ರ ಗಡಿಯನ್ನು ದಾಟಿದವು. ಎಲ್ಲಿಯವರೆಗೆ ಲಸಿಕೆ ಲಭ್ಯವಿಲ್ಲವೋ ಅಲ್ಲಿಯವರೆಗೆ ಇದೇ ರೀತಿ ನಾವೆಲ್ಲರೂ ನಮ್ಮ ನಮ್ಮ ಮನೆಗಳಲ್ಲೇ ಕೊರೋನಾ ಬಂಧನದಲ್ಲಿ ಕಳೆಯಬೇಕಾಗುತ್ತದೆ. ಈ ನಿಟ್ಟಿನಲ್ಲಿ, ನಾವೆಲ್ಲರೂ ಮುಂದಿನ ಒಳ್ಳೆಯ ಸಮಯಕ್ಕಾಗಿ ಕಾಯುತ್ತಿದ್ದೇವೆ. ಅಷ್ಟರಲ್ಲಿ ಒಂದು ಪರಿಣಾಮಕಾರಿ ಲಸಿಕೆ ಎಲ್ಲರಿಗೂ ಲಭ್ಯವಾಗಿ ಈ ಕೊರೋನಾ ಪರ್ವದಿಂದ ನಮ್ಮ ನಮ್ಮ ಜೀವನ ಮುಂದುವರೆದರೆ ಸಾಕು. ವರ್ಷ ಉರುಳಿ, ಕ್ಯಾಲೆಂಡರುಗಳು ಬದಲಾದಂತೆ ನಮ್ಮಿಂದ ಕೊರೋನಾ ಮಹಾಮಾರಿ ಆದಷ್ಟು ದೂರವಾಗಲಿ ಎನ್ನುವುದು ನಮ್ಮ ಹಾರೈಕೆ.

ಕಳೆದ ಎರಡು ತಿಂಗಳುಗಳಲ್ಲಿ ಜಂಟಿಯಾಗಿ ನಾವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ: ದಾಸ ವೈಭವ, ಎಸ್.ಪಿ. ಬಾಲಸುಬ್ರಹ್ಮಣ್ಯಮ್ ಮತ್ತು ರಾಜನ್ ಅವರ ಸ್ಮರಣಾರ್ಥ ಕಾರ್ಯಕ್ರಮ, ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳು. ಮೊದಲಿನ ಎರಡು ಕಾರ್ಯಕ್ರಮಗಳು ಎಂದಿನಂತೆ ವರ್ಚುವಲ್ ಮಾದರಿಯಲ್ಲಿ ನಡೆದರೆ, ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ನಾವು ಸ್ಥಳೀಯ ಪಾರ್ಕ್ ಒಂದರಲ್ಲಿ ಧ್ವಜಾರೋಹಣ ಮತ್ತು ಭುವನೇಶ್ವರಿಯ ಪೂಜೆಯನ್ನು ಅದ್ದೂರಿಯಾಗಿ ನಡೆಸಿಕೊಟ್ಟೆವು. ಜೊತೆಯಲ್ಲಿ, ನವೆಂಬರ್ ಒಂದರ ಸಂಜೆ, ಅಮೇರಿಕದ ಇತರ ಏಳು ಸಹ ಕನ್ನಡ ಕೂಟಗಳೊಂದಿಗೆ ಕೈ ಜೋಡಿಸಿ ಜಂಟಿಯಾಗಿ ಒಂದು ವರ್ಚುವಲ್ ಕಾರ್ಯಕ್ರಮವನ್ನೂ ನಡೆಸಿಕೊಟ್ಟೆವು. ಹಿಂದೆಂದಿಗಿಂತಲೂ ಉತ್ಸುಕತೆಯಿಂದ ಈ ವಚುವಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಅಮೇರಿಕದ ಎಲ್ಲ ಬಂಧುಗಳಿಗೂ ನಾವು ಚಿರಋಣಿಗಳು. ಅಂತೆಯೇ ನಮ್ಮ ಸೌರಭ ತಂಡದ ಕೊನೆಯ ಕಾರ್ಯಕ್ರಮವಾದ ಮಕ್ಕಳ ದಿನಾಚರಣೆ ಮತ್ತು ವಾರ್ಷಿಕೋತ್ಸವವನ್ನು ಡಿಸೆಂಬರ್ 5ರಂದು ನಡೆಸಿಕೊಟ್ಟೆವು. ಸುಮಾರು ನಾಲ್ಕು ಗಂಟೆಗಳಿಗಿಂತಲೂ ಹೆಚ್ಚು ನಡೆದ ಈ ಕಾರ್ಯಕ್ರಮದಲ್ಲಿ ಮಕ್ಕಳಿಂದ ಹಿರಿಯರ ವರೆಗೆ ಎಲ್ಲ ಸದಸ್ಯರೂ ಭಾಗವಹಿಸಿ ವರ್ಚುವಲ್ ಆಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟದು ವಿಶೇಷ. ಈ ಕೊನೆಯ ಕಾರ್ಯಕ್ರಮಕ್ಕೆ ಪೂರಕವಾಗಿ ನಾವು ಅನೇಕ ಸ್ಪರ್ಧೆಗಳನ್ನು ಆಯೋಸಿದ್ದೆವು. ಅವುಗಳಲ್ಲಿ ಕೋಗಿಲೆ, ನಾಟ್ಯ ಮತ್ತು ಕನ್ನಡ ಸ್ಪರ್ಧೆಗಳು ಮುಖ್ಯವಾದವು. ಈ ಎಲ್ಲ ಪೂರಕ ಕಾರ್ಯಕ್ರಮಗಳಲ್ಲಿ ಸುಮಾರು ನೂರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿರುವುದು ಈ ವರ್ಷದ ವಿಶೇಷ. ಈ ವರ್ಷದ ನಮ್ಮ ಹೆಚ್ಚಿನ ಕಾರ್ಯಕ್ರಮಗಳು ವರ್ಚುವಲ್ ಮಾಧ್ಯಮದಲ್ಲೇ ನಡೆದರೂ, ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸ್ಪರ್ಧಿಗಳು ಹಾಗೂ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ ಯಶಸ್ವಿಗೊಳಿಸಿದ ಎಲ್ಲ ವೀಕ್ಷಕರಿಗೂ ನಮ್ಮ ಅನಂತಾನಂತ ಧನ್ಯವಾದಗಳು.

ಈ ವರ್ಷದ ಕೊನೆಯ ಕಾರ್ಯಕ್ರಮದಲ್ಲಿ ಎರಡು ವರ್ಷಗಳಿಗೊಮ್ಮೆ ಪ್ರಕಟವಾಗುವ, ನಮ್ಮ ಬೃಂದಾವನ ವಿಶೇಷ ಸಂಚಿಕೆ, ವನವಾಣಿ 2020 ಅನ್ನು ಬಿಡುಗಡೆಗೊಳಿಸಿದೆವು. "ನವಚೇತನ" ಎನ್ನುವ ಹೊಸ ಹೆಸರಿನಿಂದ ಕಂಗೊಳಿಸುವ ವರ್ಣರಂಜಿತ ಸಂಚಿಕೆ ಆದಷ್ಟು ಬೇಗ ಮುದ್ರಣಗೊಂಡು ನಿಮ್ಮ ಕೈಸೇರಲಿದೆ. ಈ ಕೊನೆಯ ಕಾರ್ಯಕ್ರಮದಲ್ಲಿ ಚುನಾವಣಾ ಆಯೋಗ ಮುಂದಿನ ತಂಡದ ವಿವರವನ್ನು ಪ್ರಕಟಗೊಳಿಸಿದೆ. ಬರುವ ಎರಡು ವರ್ಷ ಬೃಂದಾವನದ ಚುಕ್ಕಾಣಿಯನ್ನು ಹಿಡಿಯಲಿರುವ ಈ ಹೊಸ ತಂಡಕ್ಕೆ ನಮ್ಮ ಹಾರ್ಧಿಕ ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು.

ಇದು ಸೌರಭ ತಂಡದವತಿಯಿಂದ ಪ್ರಕಟಿಸುತ್ತಿರುವ ಕೊನೆಯ ದ್ವೈಮಾಸಿಕ ಸಂಚಿಕೆ. ಎರಡು ವರ್ಷದ ಹಿಂದೆ ಅಸ್ತಿತ್ವಕ್ಕೆ ಬಂದ ಸೌರಭ ತಂಡದ "ಬೃಂದಾವನ ವಾಣಿ" ತಂಡದ ಎಲ್ಲ ಸದಸ್ಯರಿಗೆ ಬೆನ್ನು ತಟ್ಟಿ ಪ್ರೋತ್ಸಹ ನೀಡಿದ ಎಲ್ಲ ಬಂಧುಗಳಿಗೂ ಹೃತ್ಪೂರ್ವಕ ಧನ್ಯವಾದಗಳು. ನಮ್ಮ ನೋವು ನಲಿವು ಉತ್ಸಾಹ ಉನ್ಮಾದಗಳಲ್ಲಿ ಭಾಗಿಗಳಾಗಿ ಈ ಕಳೆದ ವರ್ಷಗಳಲ್ಲಿ ನಮ್ಮನ್ನು ಹರಸಿದ್ದೀರಿ. ನಿಮ್ಮ ಪ್ರೋತ್ಸಾಹ ನಿರಂತರವಾಗಿರಲಿ.

ಮುಂಬರುವ ರಜಾ ದಿನಗಳಲ್ಲಿ ಎಲ್ಲ ಕಡೆಯಲ್ಲಿ ಸುಖ-ಶಾಂತಿ ನೆಲೆಸಲಿ.



**ಸತೀಶ್ ಹೊಸನಗರ**
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ
**ಸೌರಭ ತಂಡ**ದ ಪರವಾಗಿ





# ಭಾರತರತ್ನ ಪುರಸ್ಕೃತ ಕನ್ನಡಿಗರು

*ಹತ್ತಿಬೆಳಗಲ್ ನಾಗರಾಜ ರಾವ್, ಜರ್ಮನಿ*

'**ಹಿಂ**ದೂಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು
ಕನ್ನಡ ಹಿರಿಮೆಯ ಮಗನಾಗು ಕನ್ನಡ ಸಿರಿಯ ಮಗನಾಗು'...

ಸಾಲುಗಳಿಗೆ ಪುಳಕಿತಗೊಳ್ಳದ ಕನ್ನಡಿಗರಿಲ್ಲ. ಹೆತ್ತವರಿಗೆ ತಮ್ಮ ಮಕ್ಕಳು ಕನ್ನಡ ನಾಡು- ನುಡಿಗೆ ಹಿರಿಮೆ ತರುವ ಕನ್ನಡ ಸಿರಿಯಾಗಿ ಬೆಳೆದು , ಸ್ವದೇಶಕ್ಕೆ ಕೂಡುಗೆ ನೀಡುವಂತಾಗಲಿ ಎಂಬ ಬಯಕೆ ಮತ್ತು ಹಾರೈಕೆಯ ಹೊನ್ನುಡಿಗಳಿವು.

ನಮ್ಮ ಭಾರತ ದೇಶದಲ್ಲಿ 'ಭಾರತ ರತ್ನ' ಎಂಬ ಅತ್ಯುನ್ನತ ಪ್ರಶಸ್ತಿಯನ್ನು ಕಲೆ, ಸಾಹಿತ್ಯ, ವಿಜ್ಞಾನ, ಸಾರ್ವಜನಿಕ ಸೇವೆ, ತಂತ್ರಜ್ಞಾನ, ಕ್ರೀಡೆ, ಇತರ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದ ಗಣ್ಯರಿಗೆ ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು 1954 ಜನವರಿ 2 ರಂದು ಆಗಿನ ರಾಷ್ಟ್ರಪತಿಗಳಾಗಿದ್ದ ಡಾ.ಬಾಬು ರಾಜೇಂದ್ರ ಪ್ರಸಾದ್ ಅವರು ಪ್ರಾರಂಭಿಸಿದರು. ಪದ್ಮಭೂಷಣ, ಪದ್ಮಶ್ರೀ, ಪದ್ಮವಿಭೂಷಣ ಪ್ರಶಸ್ತಿಗಳೆಲ್ಲವಕ್ಕೂ ಶಿಖರಪ್ರಾಯದಂತೆ 'ಭಾರತ ರತ್ನ' ಪ್ರಶಸ್ತಿ. ಬೆಲೆಕಟ್ಟಲಾಗದ ಈ ಅಮೂಲ್ಯ ಪ್ರಶಸ್ತಿ ಸೂರ್ಯನ ಚಿತ್ರ ಮತ್ತು ಅರಳಿ ಎಲೆಯ ಚಿತ್ರದ ಮೇಲೆ ದೇವನಾಗರಿ ಲಿಪಿಯಲ್ಲಿ "ಭಾರತ ರತ್ನ" ಎಂದಿರುವ ಪದಕ ಶ್ರೇಷ್ಠತೆಯ ಗುರುತಾಗಿ ನಿಂತಿದೆ. ಇಲ್ಲಿಯವರೆಗೆ ಈ ಪ್ರಶಸ್ತಿಯಿಂದ ೪೫ ಭಾರತೀಯರು ಅಲಂಕೃತರಾಗಿದ್ದಾರೆ. ಅವರಲ್ಲಿ ಮೂವರು ಕನ್ನಡದ ಅಸಮಾನ್ಯ ಸಾಧಕರು ಗೌರವ ಭಾಜನರಾಗಿರುವುದು ಕನ್ನಡಿಗರಿಗೆ ಬಹು ದೊಡ್ಡ ಹೆಮ್ಮೆಯ ಸಂಗತಿ.

ತಂತ್ರಜ್ಞಾನಿ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು, ಹಿಂದೂಸ್ತಾನಿ ಗಾಯಕ ಶ್ರೀ ಬೀಮಸೇನ ಜೋಶಿಯವರು ಮತ್ತು ಖ್ಯಾತ ವಿಜ್ಞಾನಿ ಪ್ರೊ. ಸಿ ಎನ್ ಆರ್ ರಾವ್ ಅವರು ಕ್ರಮವಾಗಿ 'ಭಾರತ ರತ್ನ' ಪುರಸ್ಕೃತ ಕನ್ನಡಿಗರಾಗಿದ್ದಾರೆ. ಕನ್ನಡ ರಾಜ್ಯೋತ್ಸವ ಹಬ್ಬದಲ್ಲಿ ನಮ್ಮ ಹಿರಿಯ ಮಹಾನ್ ಚೇತನಗಳ ಜೀವನ , ಸಾಧನೆಯ ಅವಲೋಕನ ಸಮಯೋಚಿತವೇ .

" **ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು** "

ಮೋಕ್ಷಗುಂಡಂ ವಿಶ್ವೇಶ್ವರಯ್ಯ ಎಂದೊಡನೆ ಕನ್ನಡಿಗರ ಕಣ್ಮುಂದೆ ಬಂದು ನಿಲ್ಲುವುದು ಕೃಷ್ಣರಾಜ ಸಾಗರ ಜಲಾಶಯ, ಕಣ್ಮನ ತಣಿಸುವ ಹಸಿರು ಬೃಂದಾವನ, ಶಿವನ ಸಮುದ್ರದ ವಿದ್ಯುತ್ ಉತ್ಪಾದನಾ ಕೇಂದ್ರ, ಮೈಸೂರು ಸಾಬೂನು ಕೈಗಾರಿಕೆ, ವಿಶ್ವೇಶ್ವರಯ್ಯ ಮ್ಯೂಸಿಯಂ, ...ಹೀಗೆ ಹತ್ತು ಹಲವು. ಕನ್ನಡನಾಡಿನ ಭೂಮಿಯ ಗುಣ , ಜಲ , ಅಗಾಧ ಪ್ರಕೃತಿಯ ಸ್ವಾಭಾವಿಕ




ಆಕರಗಳನ್ನು ವಿಜ್ಞಾನ, ತಂತ್ರಜ್ಞಾನಗಳ ಅಳತೆಗೋಲಿನಡಿಯಲ್ಲಿ ಅಗಾಧ ಪರಿಶ್ರಮ, ದೂರದೃಷ್ಟಿಯಿಂದ ಮುಂಚೂಣಿಯಲ್ಲಿ ನಿಂತು ಸಮಾಜಮುಖಿ ಯೋಜನೆಗಳ ನಿರ್ಮಾಣಕ್ಕೆ ಚಾಲನೆ ನೀಡಿದವರು. ಇವರ ಕಾರ್ಯವ್ಯಾಪ್ತಿ ನಮ್ಮ ರಾಜ್ಯಕ್ಕೆ ಸೀಮಿತವಾಗದೇ ದೇಶದೆಲ್ಲಡೆ ಹಬ್ಬಿತ್ತು. ಸಾರ್ಥಕತೆಯ ಪ್ರತೀಕವಾಗಿ 'ಭಾರತ ರತ್ನ' ಪ್ರಶಸ್ತಿಗೆಭಾಜನರಾದ ಮೊತ್ತ ಮೊದಲ ಕನ್ನಡಿಗ.

ಶ್ರೀಯುತರು ಸೆಪ್ಟೆಂಬರ್ 15,1860 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಗ್ರಾಮದಲ್ಲಿ 'ಶ್ರೀನಿವಾಸ ಶಾಸ್ತ್ರಿ' ಮತ್ತು 'ವೆಂಕಟಲಕ್ಷ್ಮಮ್ಮ' ನವರ ಮಗನಾಗಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ಹಾಗೂ ಪ್ರೌಢ ಶಿಕ್ಷಣ ಬೆಂಗಳೂರಿನಲ್ಲಿ ನಡೆಯಿತು. ಅವರು ೧೫ ವರ್ಷದವರಿರುವಾಗಲೆ ತಂದೆ ಶ್ರೀನಿವಾಸ ಶಾಸ್ತ್ರಿಯವರು ನಿಧನರಾದರು. ನಂತರದ ದಿನಗಳಲ್ಲಿ ಇವರ ತಾಯಿಯವರು ಅವರಿವರ ಮನೆಕೆಲಸ ಮಾಡಿ ಮಗನನ್ನು ಸಾಕಿದರು. ಇವರು ಎಸ್ ಎಸ್. ಎಲ್. ಸಿ ಪರೀಕ್ಷೆಗೆ ಹಣದ ತೀವ್ರ ಮುಗ್ಗಟ್ಟಿನಿಂದಾಗಿ ಬೆಂಗಳೂರಿನಿಂದ ಮುದ್ದೇನಹಳ್ಳಿಗೆ ೩೫ ಕಿಲೋಮೀಟರ್ ನಡೆದುಕೊಂಡೇ ಹೋದರು. ಮನೆಯ ಪಾತ್ರೆ ಅಡವಿಟ್ಟು ಆ ತಾಯಿ ಹಣ ಹೊಂದಿಸಿಕೊಟ್ಟಿದ್ದರು. " ಈಸಬೇಕು, ಇದ್ದು ಜಯಿಸಬೇಕು " ಎಂಬ ದಾಸವಾಣಿಯಂತೆ, ಜೀವನೋತ್ಸಾಹದಿಂದ ಬದುಕನ್ನು ಎದುರಿಸುವ ದಾರ್ಢ್ಯ ಮೈದೋರಿತ್ತು. ಬಡತನ, ಅದಾವ ಅಡೆತಡೆ ಬಂದರೂ ಛಲದಿಂದ ವಿದ್ಯಾರ್ಥಿ ವೇತನದಿಂದಾಗಿ ಮದ್ರಾಸಿನಲ್ಲಿ ೧೮೮೧ ರಲ್ಲಿ ಬಿ.ಎ ಪದವಿಯನ್ನೂ, ಪುಣೆಯಲ್ಲಿ ಸಿವಿಲ್ ಇಂಜನಿಯರಿಂಗ್ ಪದವಿಯನ್ನೂ ಪಡೆದರು.

ಪದವಿ ನಂತರ ಕೆಲಸ ನಿರ್ವಹಿಸಲು ಹೋದದೆಯಲ್ಲೆಲ್ಲ ತಮ್ಮ ಜ್ಞಾನ, ದೂರದೃಷ್ಟಿ ಜಾಗೂ ಪರಿಶ್ರಮದಿಂದ ಅತ್ಯುನ್ನತ ಯಶಸ್ಸು ಪಡೆಯುತ್ತಲೇ ಹೋದರು.ಇಂಜನಿಯರಿಂಗ್ ಪದವಿ ಬಳಿಕ ಮುಂಬಯಿ ಲೋಕೋಪಯೋಗಿ ಭಾರತೀಯ ನೀರಾವರಿ ಆಯೋಗವನ್ನು ಸೇರಿದ್ದರು. ನಂತರ ನೀರಾವರಿ ಇಲಾಖೆ ಸೇರಿ ದಖನ್ ಪ್ರಸ್ತಭೂಮಿಯಲ್ಲೇ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ಪರಿಚಯಿಸಿದರು. ಅಣೆಕಟ್ಟುಗಳಲ್ಲಿ ಉಪಯೋಗಿಸಲಾಗುವ 'ಸ್ವಯಂಚಾಲಿತ ಫ್ಲಡ್ ಗೇಟ್ ವಿನ್ಯಾಸ'ವೊಂದನ್ನು ಕಂಡು ಹಿಡಿದು 'ಪೇಟೆಂಟ್' ಪಡೆದರು. ಮೊದಲ ಬಾರಿಗೆ ೧೯೦೩ ರಲ್ಲಿ ಫ್ಲಡ್ ಗೇಟ್ ಗಳು ಪುಣೆಯ 'ಖಡಕ್ವಾಸ್ಲಾ' ಅಣೆಕಟ್ಟಿನಲ್ಲಿ ಸ್ಥಾಪಿತವಾದವು. ನಂತರ 'ಗ್ವಾಲಿಯರಿನ ಟಿಗ್ರಾ ಅಣೆಕಟ್ಟು' ಮತ್ತು ಕರ್ನಾಟಕದ 'ಕೃಷ್ಣರಾಜಸಾಗರ' ಅಣೆಕಟ್ಟುಗಳಲ್ಲಿ ಉಪಯೋಗಿಸಲ್ಪಟ್ಟವು. ಕೃಷ್ಣರಾಜ ಸಾಗರ ಆಗಿನ ಕಾಲದಲ್ಲಿ ಭಾರತದ ಅತ್ಯಂತ ದೊಡ್ಡ ಅಣೆಕಟ್ಟಾಗಿತ್ತು. ಹೈದರಾಬಾದ್ ನಗರವನ್ನು ಪ್ರವಾಹಗಳಿಂದ ರಕ್ಷಿಸಲು ಪ್ರವಾಹ ರಕ್ಷಣಾ ವ್ಯವಸ್ಥೆಯನ್ನು ರೂಪಿಸಿದಾಗ ವಿಶ್ವೇಶ್ವರಯ್ಯನವರು ದೇಶದಾದ್ಯಂತ ಪ್ರಸಿದ್ಧರಾದರು. ಕನ್ನಂಬಾಡಿ ಅಣೆಕಟ್ಟು ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನು ಪೂರೈಸಿದಂತಹ ಮಹತ್ವದ ಸಾಧನೆಗಳಿಗಾಗಿ ಬ್ರಿಟಿಷ್ ಸರ್ಕಾರ ಅವರನ್ನು ನೈಟ್ ಕಮಾಂಡರ್ ಆಗಿ ನೇಮಿಸಿ 'ಸರ್' ಪದವಿಯನ್ನು ನೀಡಿತು. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 'ಸರ್ ಎಂ ವಿಶ್ವೇಶ್ವರಯ್ಯ' ಎಂದು ವಿಖ್ಯಾತರಾದರು.

ಹೆಣ್ಣುಮಕ್ಕಳಿಗಾಗಿ ಮಹಾರಾಣಿ ಕಾಲೇಜು, ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್ ಸೌಲಭ್ಯಗಳು, ಮೈಸೂರು ವಿಶ್ವವಿದ್ಯಾಲಯ, ಹಲವು ಕೈಗಾರಿಕೆಗಳು, ಸಾರ್ವಜನಿಕ ಗ್ರಂಥಾಲಯಗಳು, ಕನ್ನಡ ಸಾಹಿತ್ಯ ಪರಿಷತ್, ಬ್ಯಾಂಕ್ ಮೊದಲಾದವು ಅವರ ದೂರದೃಷ್ಟಿಯ ಸಮಗ್ರ ಕೊಡುಗೆಗಳು.ಆಡಳಿತದಲ್ಲಿಯೂ ದಕ್ಷರಾದ ವಿಶ್ವೇಶ್ವರಯ್ಯನವರು ೧೯೧೨ರಲ್ಲಿ ಮೈಸೂರು ಸಂಸ್ಥಾನದ ಏಳನೆ ದಿವಾನರಾದರು. ದಿವಾನರಾಗುವ ಮೊದಲು ತನ್ನ ತಾಯಿಗೆ 'ನೀನು ಯಾರ ಶಿಫಾರಸ್ಸನ್ನೂ ನನ್ನಲ್ಲಿಗೆ ತರುವುದಿಲ್ಲ ಎಂದರೆ ಮಾತ್ರ ನಾನು ದಿವಾನ ಪದವಿಯನ್ನು ಒಪ್ಪಿಕೊಳ್ಳುವೆ' ಎಂದು ಹೇಳಿದ್ದು, ಅವರ ನಿಷ್ಪಕ್ಷಪಾತ ಧೋರಣೆಗೆ ನಿಲುಗನ್ನಡಿಯಂತಿದೆ.

ಇವರ ಪ್ರಾಮಾಣಿಕತೆ ಸಾರುವ ಅನೇಕ ಕಥೆಗಳು ಮೈಸೂರ ಸೀಮೆಯಲ್ಲಿ ಜನಜನಿತವಾಗಿದೆ. ಒಂದನ್ನು ಉಲ್ಲೇಖಿಸುವುದಾದರೆ, ವಿಶ್ವೇಶ್ವರಯ್ಯನವರು ಸರ್ಕಾರದ ಕೆಲಸ ನಿರ್ವಹಿಸುವವರೆಗೆ ಮಾತ್ರ ಸರಕಾರ ಕೊಟ್ಟ ಮೇಣದಬತ್ತಿಯ ಬೆಳಕನ್ನು ಬಳಸುತ್ತಿದ್ದರಂತೆ. ನಂತರ ಅದನ್ನು ಆರಿಸಿ, ವೈಯುಕ್ತಿಕ ಕೆಲಸಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಕೊಂಡ ಮೇಣದಬತ್ತಿಯನ್ನು ಬಳಸುತ್ತಿದ್ದರಂತೆ.



'ಸರಳ ಜೀವನ ಉನ್ನತ ಆಲೋಚನೆ' ತತ್ವದಂತೆ ೧೦೧ ವರ್ಷಗಳ ತುಂಬು ಬದುಕನ್ನು ಸಾರ್ಥಕ ಗೊಳಿಸಿದವ್ರು ಸರ್ ಎಂ ವಿ . ಇವರಿಗೆ ಹತ್ತು ಹಲವು ಪ್ರಶಸ್ತಿಗಳು ದೇಶ ವಿದೇಶಗಳಿಂದ ಹರಿದು ಬಂದವು. ಭಾರತ ಸರ್ಕಾರವು ೧೯೫೫ರಲ್ಲಿ 'ಭಾರತ ರತ್ನ' ಪ್ರಶಸ್ತಿ ನೀಡಿ ಮಹಾಸಾಧಕನನ್ನು ಗೌರವಿಸಿತು. ಸೆಪ್ಟಂಬರ್ ೧೫ ಇವರ ಜನ್ಮದಿನವನ್ನು ದೇಶದಲ್ಲಿ 'ಅಭಿಯಂತರರ ದಿನ' ವನ್ನಾಗಿ ಆಚರಿಸಲಾಗುತ್ತಿದೆ. ಹೆಮ್ಮೆಯ ಕನ್ನಡಿಗನ ಸಾಧನ ಕಿರಣಗಳು ನಮ್ಮೆಲ್ಲರನ್ನೂ ಸಾರ್ಥಕ ಜೀವನಕ್ಕೆ ಪ್ರೇರೇಪಿಸಲಿ ಎಂಬ ಸದಾಶಯದೊಂದಿಗೆ ಮಹಾಚೇತನಕ್ಕೆ ಭಾವ ನಮನಗಳು.

" **ಪಂಡಿತ ಭೀಮಸೇನ ಜೋಶಿ** "

ಹಿಂದೂಸ್ತಾನಿ ಸಂಗೀತ ಪದ್ಧತಿಯ ಗಾಯನದಲ್ಲಿ ಅತ್ಯದ್ಭುತ ಸಾಧನೆ ಮಾಡಿ ದೇಶ ವಿದೇಶದಲ್ಲಿ ವಿಶಿಷ್ಟ ಛಾಪು ಮೂಡಿಸಿದ ಹೆಮ್ಮೆಯ ಕನ್ನಡಿಗ ಪಂಡಿತ ಭೀಮಸೇನ ಜೋಶಿ . " ಭಾಗ್ಯದ ಲಕ್ಷ್ಮಿ ಬಾರಮ್ಮ , ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮಿ ಬಾರಮ್ಮ .." ದಾಸರಪದ ಕನ್ನಡಿಗರಲ್ಲಿ ಮಾತ್ರವಲ್ಲದೆ ಅನ್ಯಭಾಷಿಕರಲ್ಲೂ ಗುನುಗುನಿಸುವಂತೆ ಮಾಡಿದ ಸ್ವರ ಮಾಂತ್ರಿಕ.

ಭೀಮಸೇನ ಜೋಶಿಯವರು ೪ರ ಫೆಬ್ರವರಿ ೧೯೨೨ರಂದು ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿ ಗುರುರಾಜ ಜೋಶಿ ಮತ್ತು ರಮಾಬಾಯಿಯವರ ಮಗನಾಗಿ ಜನಿಸಿದರು. ಇವರಿಗೆ ಬಾಲ್ಯದಿಂದಲೇ ಸಂಗೀತದ ಗೀಳು, ಓದು ಬರಹದಲ್ಲಿ ಆಸಕ್ತಿ ಇರದಾಯಿತು. ಜೋಶಿಯವರು ತಮ್ಮ ತಂದೆಯವರ ವಿರೋಧದ ನಡುವೆ ಗುರುವನ್ನು ಅರಸುತ್ತ ಹನ್ನೊಂದನೆಯ ವಯಸ್ಸಿನಲ್ಲಿಯೇ ಮನೆ ಬಿಟ್ಟು ಮುಂಬಯಿಗೆ ಹೋದರು. ಬರಿಗೈಲಿ ಮುಂಬಯಿ ತಲುಪಿದ ಬಾಲಕ ಭೀಮಸೇನರು ಚಿಕ್ಕ ಕೆಲಸಗಳನ್ನು ಮಾಡುತ್ತ, ರಸ್ತೆ ಬದಿಯಲ್ಲಿ ಕೆಲಕಾಲ ಕಳೆದಿದ್ದರು. ಕೆಲ ಕಾಲ ಸಂಗೀತ ಸಾಧನೆಯ ಹರಕೆಹೊತ್ತು ಮಂತ್ರಾಲಯದಲ್ಲಿ ಗುರುರಾಘವೇಂದ್ರರ ಸೇವೆಯನ್ನು ಕೈಕೊಂಡರು. ಪುನಃ ಅವರು ಹುಟ್ಟೂರಿಗೆ ಮರಳಿದರು. ಸಂಗೀತ ಕಲಿಯಲೇಬೇಕೆಂಬ ಆಸೆ ಮತ್ತು ಛಲ, ಅವರನ್ನು ಪುನಃ ಮನೆ ಬಿಟ್ಟು ಗ್ವಾಲಿಯರಿಗೆ ಓಡುವಂತೆ ಮಾಡಿತು. ಗಾಯಕ ವಿನಾಯಕ್ ರಾವ್ ಪಟವರ್ಧನ್ ನಿರ್ದೇಶನದಂತೆ 'ಸವಾಯಿ ಗಂಧರ್ವ'ರಲ್ಲಿ ಸಂಗೀತ ಕಲಿಯುವುದಕ್ಕಾಗಿ ಕುಂದಗೋಳ ಕ್ಕೆ ಬಂದರು. ಅಲ್ಲಿ ಹಿಂದುಸ್ತಾನಿ ಸಂಗೀತದ 'ಕಿರಾಣಾ ಘರಾನಾ'ದಲ್ಲಿ ಪರಿಣತರಾಗಿ ಭೀಮಸೇನ ಜೋಶಿಯವರು ಹಲವು ದಶಕಗಳ ಕಾಲ ಕಛೇರಿಗಳನ್ನು ನಡೆಸಿದರು.

ಕೊಲ್ಕತ್ತಾದಲ್ಲಿ ಹಿಂದೂಸ್ತಾನೀ ಸಂಗೀತ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿ 'ಆಲ್ ಬೆಂಗಾಲ್ ಮ್ಯೂಸಿಕ್ ಕಾನ್ಫರೆನ್ಸ್', 'ತಾನ್ಸೇನ್ ಮ್ಯೂಸಿಕ್ ಕಾನ್ಫರೆನ್ಸ್', 'ಡೋವರ್ ಲೇನ್ ಮ್ಯೂಸಿಕ್ ಕಾನ್ಫರೆನ್ಸ್' ಗಳಲ್ಲಿ ಭಾಗವಹಿಸುತ್ತಿದ್ದರು. ಆಫ್ಘಾನೀಸ್ಥಾನಕ್ಕೆ ಪ್ರಥಮ ವಿದೇಶ ಯಾತ್ರೆ ಮಾಡಿದ್ದರು. ಭಾರತಭೀಮಸೇನ ಜೋಶಿಯವರ ಸಂಗೀತದ, ಧ್ವನಿಸುರಳಿಗಳು ಮತ್ತು ಧ್ವನಿಮುದ್ರಿಕೆಗಳು, ಪ್ರತಿಯೊಬ್ಬರ ಮನೆ-ಮನವನ್ನು ತಲುಪಿವೆ. ಸಂಗೀತದಲ್ಲಿ 'ಕಲಾಶ್ರೀ' ರಾಗವನ್ನು ರಚಿಸಿದರು. ಕನ್ನಡದಲ್ಲಿ ಜೋಶಿಯವರ ದಾಸರಪದಗಳು, ಭಾವಗೀತೆಗಳು , ಮೊದಲಾದವುಗಳು . ಹಿಂದಿಯಲ್ಲಿ ಭಜನೆಗಳು,ಮರಾಠ ಅಭಂಗ, ನಾಟ್ಯಗೀತೆಗಳು, ಇತ್ಯಾದಿಗಳನ್ನು ಬಹಳಷ್ಟು ಹಾಡಿದ್ದಾರೆ. ಅಪಾರ



ಶ್ರೋತೃವರ್ಗದ ಹರ್ಷೋದ್ಗಾರಕ್ಕೆ ಪಾತ್ರರಾಗಿದ್ದರು.

ಆಕಾಶವಾಣಿಯಲ್ಲಿ 'ಪ್ರಥಮ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ' ನಡೆಸಿಕೊಟ್ಟರು. ರಾಮೇಶ್ವರ ಮಂದಿರ ಪುಣೆಯ ಬ್ರಹ್ಮವೃಂದ 'ಪಂಡಿತ' ಬಿರುದು ನೀಡಿ ಗೌರವಿಸಿದರು. ಗಂಧರ್ವ ಮಹಾವಿದ್ಯಾಲಯದಿಂದ ಪ್ರಶಸ್ತಿ ಹಾಗೂ 'ಗಾಯನಾಚಾರ್ಯ' ಪ್ರಶಸ್ತಿ, ಸ್ವರ ಭಾಸ್ಕರ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ಸಂಗೀತ ನಾಟಕ ಪ್ರಶಸ್ತಿ, ಮಿಯಾತಾನ್ ಸೇನ್ ಪ್ರಶಸ್ತಿ, ಮಹಾರಾಷ್ಟ್ರ ಸರ್ಕಾರದಿಂದ ಸರ್ವೋತ್ತಮ ಪಾರ್ಷ್ವ ಪ್ರಶಸ್ತಿ, ದೀನಾನಾಥ್ ಮಂಗೇಶ್ವರ ಪುರಸ್ಕಾರ, ತಿಲಕ್ ಪೀಠದಿಂದ ಡಿ.ಲಿಟ್ ಪದವಿ, ಪದ್ಮ ವಿಭೂಷಣ ಪ್ರಶಸ್ತಿ, ಧಾರಾವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್, ಕರ್ನಾಟಕ ಸರ್ಕಾರದಿಂದ 'ಪ್ರಶಸ್ತಿ', ಮಂತ್ರಾಲಯ ವಿದ್ಯಾಮಠ ದಿಂದ 'ಸಂಗೀತ ರತ್ನ' ಹೀಗೆ ಹಲವಾರು ಗೌರವಾದರಗಳಿಗೆ ಭಾಜನರಾದರು. ೨೦೦೯ರಲ್ಲಿ ಸಂಗೀತ ಕ್ಷೇತ್ರದಲ್ಲಿ ಮೊದಲ ಬಾರಿಗೆ ನಮ್ಮ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿ ಪಡೆದರು.

ಗದುಗಿನ 'ಖಡಕ್ ರೊಟ್ಟಿ' ಮತ್ತು ಝುಣಕ ಬಲುಪ್ರೀತಿ. ಅನೇಕ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿ ರಸದೌತಣನೀಡಿದ್ದರು. ಅದರಲ್ಲಿ ಶೇಖರವಾದ ಹಣದಲ್ಲಿ ನಗರದ ವಿವಿಧ ಶಾಲೆಗಳ ಕೊಠಡಿ ನಿರ್ಮಾಣ ಕಾರ್ಯಗಳಿಗೆ, ದೇವಾಲಯಕ್ಕೆ, ಕಲಾವಿದರಿಗೆ ದೇಣಿಗೆ ನೀಡುತ್ತಾ ಸಮಾಜಮುಖಿಯಾಗಿದ್ದರು. ಭೀಮಸೇನರು ಮೌನ ಸ್ವಭಾವದವರು ಪ್ರಶ್ನೆಗಳಿಗೆ ನೇರ ಉತ್ತರ ನೀಡುತ್ತಿರಲಿಲ್ಲ. ಬದಲಾಗಿ 'ಬೃಂದಾವನ ಸಾರಂಗದಲ್ಲೋ,' ಭೀಮ ಪಲಾಸಿನಲ್ಲೋ', ಅಥವಾ ಮತ್ಯಾವುದೋ ಮುದಕೊಡುವ ರಾಗಗಳಲ್ಲಿಯೇ ಉತ್ತರ ನೀಡುತ್ತಿದ್ದರು. ಅವರ ಮೈಮನಗಳಲ್ಲಿ ಇದ್ದದ್ದು 'ಸಂಗೀತ', 'ಕೇವಲ ಸಂಗೀತ,' ಹಾಗೂ ಅಪಾರ ಗುರುಭಕ್ತಿ ಮಾತ್ರ. ೨೦೧೧ ಜನವರಿ ೨೪ ರಂದು ಸಂಗೀತರತ್ನ ಕಣ್ಮರೆಯಾಯಿತು. ಅವರ ಗಾಯನದ ಧ್ವನಿ ಮುದ್ರಿಕೆಗಳ ಮುಖೇನ ಚಿರಸ್ಥಾಯಿಯಾಗಿರುವರು. ಧೀಮಂತ ಕನ್ನಡಿಗನ ಸ್ವರಮಾಧುರ್ಯವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಸದಾಶಯದೊಂದಿಗೆ ನುಡಿನಮನಗಳು.

" **ಪ್ರೊ ಸಿ ಎನ್ ಆರ್ ರಾವ್** "

ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ವೈಜ್ಞಾನಿಕ ಸಂಶೋಧನಾ ಕ್ಷೇತ್ರದಲ್ಲಿ ವಿಶ್ವ ಭೂಪಟದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಿದವರು.

ಸಿ ಎನ್ ಆರ್ ರಾವ್ ಎಂದೇ ಗುರುತಿಸಲ್ಪಡುವ ಚಿಂತಾಮಣಿ ನಾಗೇಶ್ ರಾವ್ ರಾಮಚಂದ್ರ ರಾವ್ ಅವರು ೧೯೩೪ ರ ಜೂನ್ ೩೦ ರಂದು ಬೆಂಗಳೂರಿನಲ್ಲಿ ಹನುಮಂತ ನಾಗೇಶ್ ರಾವ್ ಮತ್ತು ತಾಯಿ ನಾಗಮ್ಮನವರ ಮಗನಾಗಿ ಜನಿಸಿದರು.

ವಿಜ್ಞಾನಿ ಸರ್ ಸಿ ವಿ ರಾಮನ್ ಅವರಿಂದ ಪ್ರಭಾವಿತರಾಗಿ ತಮ್ಮ ಹನ್ನೊಂದನೇ ವಯಸ್ಸಿನಲ್ಲಿ ವಿಜ್ಞಾನ ಕಲಿಯಬೇಕು ಎಂಬ ಕನಸು ಹೊತ್ತವರು ಶ್ರೀ ರಾವ್ ಅವರು. ಬನಾರಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು 'ಪರ್ಡ್ಯೂ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿಯನ್ನೂ ಪಡೆದರು. ತಮ್ಮ ಜೀವನವನ್ನು ಸಂಶೋಧನೆಗಾಗಿ ಮುಡಿಪಾಗಿಟ್ಟರು.

ಅವರು ೧೯೫೯ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ




ಉಪನ್ಯಾಸಕರಾಗಿ ಸೇವೆ ಆರಂಭಿಸಿ ನಂತರ ೧೯೬೩ರಲ್ಲಿ ಕಾನ್ಪುರದ ಐಐಟಿಗೆ ಸೇರಿದರು. ಪ್ರಸ್ತುತ ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ರಿಸರ್ಚ್‌ನಲ್ಲಿ ಪ್ರೊಫೆಸರ್ ಹಾಗೂ ಗೌರವಾಧ್ಯಕ್ಷರಾಗಿದ್ದಾರೆ. ಇವರು 'ರಸಾಯನ ಶಾಸ್ತ್ರದ ಸಾಲಿಡ್ ಸ್ಟೇಟ್ ಮತ್ತು ಮೇಟಿರಿಯಲ್ ವಿಭಾಗ'ದ ಸಂಶೋಧನೆಗೆ ವಿಶ್ವದಾದ್ಯಂತ ಹೆಸರುಗಳಿಸಿದ್ದಾರೆ. ಹಲವು ವರ್ಷಗಳಿಂದ ಪ್ರಧಾನಮಂತ್ರಿಯವರ ವೈಜ್ಞಾನಿಕ ಸಲಾಹ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಸಾಯನ ಶಾಸ್ತ್ರದಲ್ಲಿ ಸುಮಾರು 1650ಕ್ಕೂ ಹೆಚ್ಚು ಸಂಶೋಧನಾ ಲೇಖನ ಹಾಗೂ 50ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಆಕ್ಸ್‌ಫರ್ಡ್, ಮ್ಯಾಂಚೆಸ್ಟರ್, ಬನಾರಸ್, ಕೋಲ್ಕತ್ತಾ ಸೇರಿದಂತೆ ಜಗತ್ತಿನ 77 ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿವೆ. ರಾಯಲ್ ಸೊಸೈಟಿ ಆಫ್ ಲಂಡನ್, ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಸೇರಿದಂತೆ ಹಲವು ಪ್ರತಿಷ್ಠಿತ ಅಕಾಡೆಮಿಗಳ ಸದಸ್ಯತ್ವ ಇವರಿಗಿರುವುದು ಇವರ ಸಂಶೋಧನೆಯ ಮಹತ್ವವನ್ನು ತೋರುತ್ತದೆ. ಪದಾರ್ಥ ವಿಜ್ಞಾನದಲ್ಲಿನ ಅತ್ಯುನ್ನತ ಸಂಶೋಧನೆಗಾಗಿ 2005ರಲ್ಲಿ ಜಗದ್ವಿಖ್ಯಾತ ಡಾನ್ ಡೇವಿಡ್ ಪ್ರಶಸ್ತಿ ಮತ್ತು ಅತ್ಯುನ್ನತ ಗೌರವ ವಾನ್ ಹಿಪ್ಪಲ್ ಪ್ರಶಸ್ತಿ ಇವರ ಮುಡಿಗೇರಿವೆ.

೨೦೧೪ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿ ' ಭಾರತ ರತ್ನ' ಇವರ ಸಂದಿತು. ಕನ್ನಡಿಗರ ಹೆಮ್ಮೆ ಮುಮ್ಮಡಿಯಾಗಿಸಿತು.

ಶ್ರೀಯುತರು ತಮ್ಮ ೭೬ರ ವಯೋಮಾನದಲ್ಲಿಯೂ ಅಧ್ಯಯನ , ಅಧ್ಯಾಪನ , ಸಂಶೋದನೆಯಲ್ಲಿ ತೊಡಗಿರುವದು ಅಬಾಲವೃದ್ಧರಿಗೂ ಮಹಾ ಪ್ರೇರಣೆಯೇ ಸರಿ. .

ಇವರಿಗೆ ವಿಶ್ವದ ಅತ್ಯುನ್ನತ ಪ್ರಶಸ್ತಿ ' ನೋಬೆಲ್ ಪಾರಿತೋಷಕ' ಲಭಿಸಲಿ ಎಂಬ ಮನದಾಸೆ ಕನ್ನಡಿಗರದು. ಈ ಮಹಾ ಸಾಧಕನಿಗೆ ಗೌರವ ನಮನಗಳು.

ಭಾರತರತ್ನ ಪ್ರಶಸ್ತಿ ಇನ್ನಷ್ಟು ಮತ್ತಷ್ಟು ಕನ್ನಡಿಗರನ್ನು ಸಾಧನೆಯ ಸಾರ್ಥಕ್ಯದ ಶಿಖರ ಶೃಂಗವನ್ನು ತಲುಪಲು ಪ್ರೇರೇಪಿಸಲಿ, ಗುರುತಿಸಲಿ. ೬೪ನೆ ಕನ್ನಡ ರಾಜ್ಯೋತ್ಸವ ಸಂಭ್ರಮದಲ್ಲಿ ನಮ್ಮ ಭವ್ಯ ಪರಂಪರೆಯನ್ನು ಸ್ಮರಿಸುತ್ತಾ, "ವಿಶ್ವಭಾರತಿಗೆ ಕನ್ನಡದಾರತಿ, ಮೊಳಗಲಿ ಮಂಗಳ ಜಯಭೇರಿ " ಕವಿವಾಣಿ ಜಾಗೃವಾಗಿರಿಸಿಕೊಳ್ಳೋಣ.

ಮಾಹಿತಿ ಸಂಗ್ರಹ

ವಿಕಿಪೀಡಿಯ , ಅಂತರ್ಜಾಲ, ಸಾಮಾಜಿಕ ಜಾಲತಾಣ ಮೂಲಗಳಿಂದ





# ವೈಕುಂಠ ಏಕಾದಶಿ

*ವಿನೋದಾ ಸಿಂಗನಮಲ್ಲಿ*

**ಏ**ಕಾದಶಿ ಪ್ರತಿಯೊಬ್ಬರೂ ಮಾಡಲೇ ಬೇಕಾದ ಅತೀ ಶ್ರೇಷ್ಠವಾದ ವ್ರತ. ಏಕದಶ ಇಂದ್ರಿಯಗಳಿಂದ ಮಾಡಿದ ಪಾಪಗಳನ್ನು ನಾಶ ಮಾಡಿ ಪುಣ್ಯವನ್ನು ಕೊಡುವ ವ್ರತ ಏಕಾದಶಿ ಉಪವಾಸ ವ್ರತ. ಉಪ ಅಂದರೆ ಹತ್ತಿರ, ವಾಸ ಅಂದರೆ ಇರುವುದು. ಉಪವಾಸ ಅಂದರೆ ಭಗವಂತನ ಹತ್ತಿರ ಇರುವದು ಅಂತ ಅರ್ಥ. ನಾವು ಏಕಾದಶಿಯ ದಿನ ಪಂಚೇಂದ್ರಿಯಗಳನ್ನು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡು ಭಗವಂತನ ಧ್ಯಾನವನ್ನು ಮಾಡುತ್ತಾ ಅವನನ್ನು ಒಲಿಸಿಕೊಳ್ಳುವ ಸರಳ ಸಾಧನವಾಗಿದೆ .

**ಏಕಾದಶೇಂದ್ರಿಯೈಃ ಪಾಪಂ ಯತ್ಕೃತಂ ಭವತಿ ಪ್ರಭೋ |**
**ಏಕಾದಶ್ಯುಪವಾಸೇನ ತತ್ಸರ್ವಂ ವಿಲಯಂ ವ್ರಜೇತ್ ||**

ಏಕಾದಶಿ ವ್ರತವನ್ನು ಮಾಡುವದರಿಂದ ಏಕಾದಶ ಇಂದ್ರಿಯಗಳಿಂದ ಮಾಡಿದ ಎಲ್ಲ ಪಾಪಗಳಿಂದ ಮುಕ್ತರಾಗಿ ಸರ್ವಯಜ್ಞಗಳ ಫಲವನ್ನು ಪಡೆದು ಮೋಕ್ಷವೇ ಸಿಗುವದು. ರುಕ್ಮಾಂಗದ, ಅಂಬರೀಶ ಮಹಾರಾಜರು ಏಕಾದಶಿ ವ್ರತವನ್ನು ಆಚರಿಸಿ ಮೋಕ್ಷವನ್ನು ಪಡೆದರು ಅನ್ನುವ ಕಥೆಗಳನ್ನು ಏಕಾದಶಿಯ ಮಹಾತ್ಮ್ಯೆಯಲ್ಲಿ ಕೇಳುತ್ತೇವೆ. ವರ್ಷದಲ್ಲಿ ಬರುವ ಎಲ್ಲಾ ೨೪ ಏಕಾದಶಿಗಳೂ ಶ್ರೇಷ್ಠವಾದವುಗಳೆ. ಅದರಲ್ಲಿಯೂ ವೈಕುಂಠ ಏಕಾದಶಿಯಂದು ಉಪವಾಸ ಮಾಡಿದರೆ ಒಂದು ವರ್ಷದ ೨೩ ಏಕಾದಶಿ ಉಪವಾಸಗಳನ್ನು ಕೂಡಾ ಮಾಡಿದ ಫಲ ಬರುತ್ತದೆಯೆನ್ನುವ ನಂಬಿಕೆ ಇದೆ. ಮಾರ್ಗಶೀರ್ಷ ಮಾಸದ ಶುಕ್ಲ ಪಕ್ಷದ ಧನುರ್ಮಾಸದಲ್ಲಿ ಬರುವ ಪರಮ ಪವಿತ್ರವಾದ ಏಕಾದಶಿಗೆ ವೈಕುಂಠ ಏಕಾದಶಿ, ಮುಕ್ಕೋಟಿ ಏಕಾದಶಿ, ಮೋಕ್ಷದಾ ಏಕಾದಶಿ ಎಂದು ವಿವಿಧ ಹೆಸರುಗಳಿವೆ.**'ಮಾಸಾನಾಂ ಮಾರ್ಗಶೀರ್ಷೋಹಂ'** ಅಂದರೆ ಎಲ್ಲ ಮಾಸಗಳಲ್ಲಿನ ನನ್ನ ವಿಭೂತಿರೂಪ ಮಾರ್ಗಶೀರ್ಷ ಮಾಸದಲ್ಲಿದೆಯೆಂದು ಶ್ರೀಕೃಷ್ಣನೇ ಗೀತೆಯಲ್ಲಿ ಹೇಳಿರುವ ಗೀತಾ ಜಯಂತಿಯು ಸಹಿತ ಇದೇ ದಿನ. ಪಾಂಡವರಿಗೂ ಕೌರವರಿಗೂ ಕುರುಕ್ಷೇತ್ರದಲ್ಲಿ ನಡೆದ ಮಹಾಭಾರತ ಯುದ್ಧದ ಮೊದಲನೆಯ ದಿನ ಶ್ರೀ ಕೃಷ್ಣನು ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದ್ದು ಇದೆ ಪರಮ ಪವಿತ್ರ ಏಕಾದಶಿ ದಿನ.

ಈ ದಿನ ಮಹಾವಿಷ್ಣು ಗರುಡವಾಹನನಾಗಿ ವೈಕುಂಠದ ಉತ್ತರ ದ್ವಾರದ ಮೂಲಕ ಬರುವದರಿಂದಲೂ, ವೈಕುಂಠದ ಬಾಗಿಲು ತೆಗೆದಿರುವದೆಂಬ ನಂಬಿಕೆ ಇರುವದರಿಂದಲೂ ವೈಕುಂಠ ಏಕಾದಶಿಯೆಂಬ ಹೆಸರು ಬಂದಿದೆ. ಮುಕ್ಕೋಟಿ ದೇವತೆಗಳೊಂದಿಗೆ ಭೂಲೋಕಕ್ಕೆ ಬಂದು ತನ್ನ ಭಕ್ತರಿಗೆ ದರ್ಶನ ಭಾಗ್ಯವನ್ನು ಕೊಡುವನೆಂಬ ನಂಬಿಕೆ ಇರುವುದರಿಂದರಿಂದಲೂ, ಈ ಒಂದು ಏಕಾದಶಿ ಮೂರು ಕೋಟಿ ಏಕಾದಶಿಗಳಿಗೆ ಸಮನಾಗಿರುವದರಿಂದಲೂ ಮುಕ್ಕೋಟಿ ಏಕಾದಶಿಯೆಂದು ಕೂಡಾ ಕರೆಯುತ್ತಾರೆ. ಏಕಾದಶಿ ಉಪವಾಸವಿದ್ದು



ಉತ್ತರ ದ್ವಾರದಿಂದ ಭಗವಂತನ ದರ್ಶನ ಮಾಡಿದರೆ ಏಳು ಜನ್ಮಗಳಲ್ಲಿ ಮಾಡಿದ ಪಾಪಗಳೆಲ್ಲಾ ಕಳೆದು ಮೋಕ್ಷ ಪ್ರಾಪ್ತಿಯಾಗುವದೆಂಬ ನಂಬಿಕೆ ಇರುವದರಿಂದರಿಂದಲೂ, ಭಗವಾನ್ ಶ್ರೀಕೃಷ್ಣನು ಮೋಕ್ಷಪ್ರದವಾದ ಭಗವದ್ಗೀತೆಯನ್ನು ಬೋಧಿಸಿದದಿನ ಆಗಿರುವದರಿಂದಲೂ ಮೋಕ್ಷದಾ ಏಕಾದಶಿಯೆಂತಲೂ ಕರೆಯುತ್ತಾರೆ.

ವೈಕುಂಠ ಏಕಾದಶಿಯ ಬಗ್ಗೆ ಬ್ರಹ್ಮಾಂಡ ಪುರಾಣದಲ್ಲಿ ಒಂದು ಕಥೆ ಬರುತ್ತದೆ. ಗೋಕುಲವೆಂಬ ನಗರದಲ್ಲಿ ವೈಖಾಸನ ಎಂಬ ರಾಜನ ಮೃತಪಟ್ಟ ತಂದೆ ನರಕವನ್ನು ಅನುಭವಿಸುತ್ತಿರುವ ಕನಸುಬೀಳುತ್ತದೆ. ಅದರಿಂದ ಚಿಂತೆಗೊಳಗಾದ ರಾಜನು ಪಂಡಿತರ ಬಳಿ ತನ್ನ ತಂದೆಯನ್ನು ನರಕದಿಂದ ಪಾರು ಮಾಡಲು ಏನು ಮಾಡಬೇಕೆಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಅವರು ಕೇವಲ ಯಜ್ಞ ಯಾಗಾದಿಗಳನ್ನು, ದಾನಾದಿಗಳನ್ನು ಮಾಡುವದರಿಂದ ಆಗುವದಿಲ್ಲಾ. ನೀನು ಏಕಾದಶಿ ವ್ರತವನ್ನು ಮಾಡು ಅದರಿಂದ ನಿನ್ನ ತಂದೆಗೆ ಮೋಕ್ಷ ಪ್ರಾಪ್ತಿಯಾಗುತ್ತದೆಯೆಂದು ಹೇಳುತ್ತಾರೆ. ವೈಖಾಸನ ರಾಜನು ಆಸ್ಥಾನ ಪಂಡಿತರು ಹೇಳಿದಂತೆ ಎಲ್ಲ ೧೪ ಏಕಾದಶಿಗಳನ್ನು ನಿಷ್ಠೆಯಿಂದ ಮಾಡಿ ದಾನಾದಿಗಳನ್ನು ಮಾಡುತ್ತಿದ್ದಂತೆ ಅವನ ತಂದೆಗೆ ಸ್ವರ್ಗ ಪ್ರಾಪ್ತಿಯಾಗಿದ್ದು ಕೂಡಾ ಇದೇ ಏಕಾದಶಿ ಎನ್ನುವ ಕಥೆ ಬ್ರಹ್ಮಾಂಡ ಪುರಾಣದಲ್ಲಿ ಬರುತ್ತದೆ.

ಪದ್ಮ ಪುರಾಣದಲ್ಲಿ ಮುರಾನ್ ಎಂಬ ಅಸುರನನ್ನು ಭಗವಾನ್ ಶ್ರೀವಿಷ್ಣು ಸ್ತ್ರೀ ರೂಪದದಿಂದ ಬಂದು ಇದೇ ಏಕಾದಶಿಯ ದಿನ ಸಂಹಾರ ಮಾಡಿ ದೇವತೆಗಳನ್ನು ರಕ್ಷಿಸಿದ ಕಥೆ ಬರುತ್ತದೆ.

ಏಕಾದಶಿ ಉಪವಾಸಗಳನ್ನು ಮಾಡುತ್ತಿದ್ದ ನಂದಗೋಪನನ್ನು ಶ್ರಿಕೃಷ್ಣನು ವರುಣನಿಂದ ರಕ್ಷಿಸಿ , ಯಮುನಾ ನದಿಯ ಬ್ರಹ್ಮಕುಂಡದಲ್ಲಿ ಮುಳುಗಿಬಂದ ಗೋಪಾಲಕರಿಗೂ ಸಹಿತ ತನ್ನ ನಿಜರೂಪದಿಂದ ವೈಕುಂಠವನ್ನು ತೋರಿಸಿದ್ದು ಇದೇ ಏಕಾದಶಿ ಎಂಬ ನಂಬಿಕೆಯೂ ಇದೆ.

ವೈಕುಂಠ ಏಕಾದಶಿಯ ದಿನ ವಿಷ್ಣುವಿನ ದೇವಾಲಯಗಳಲ್ಲಿ ವಿಷ್ಣುವಿನ ಸನ್ನಿಧಾನ ಅಧಿಕವಾಗಿರುತ್ತದೆ ಎನ್ನುವ ನಂಬಿಕೆ ಇರುವದರಿಂದಲೂ. ವೈಕುಂಠದ ಬಾಗಿಲು ತೆರೆದಿರುತ್ತದೆ ಎಂಬ ನಂಬಿಕೆ ಇರುವುದರಿಂದಲೂ ಶ್ರೀ ವಿಷ್ಣುವಿನ / ಶ್ರೀವೇಂಕಟೇಶ್ವರ ದೇವಸ್ಥಾನಗಳಲ್ಲಿ ವಿಷೇಶವಾಗಿ ಉತ್ತರ ದಿಕ್ಕಿನಲ್ಲಿ ಅಲಂಕಾರಯುಕ್ತವಾದ ವೈಕುಂಠ ದ್ವಾರ ರೂಪಿಸಿ, ಭಕ್ತರಿಗೆ ಪ್ರವೇಶ ಕಲ್ಪಿಸ್ತಾರೆ. ಲಕ್ಷಾಂತರ ಭಕ್ತರು ಬೆಳಗಿನ ೪ಗಂಟೆಯಿಂದಲೇ ದೇವಸ್ಥಾನದ ಮುಂದೆ ಭಗವಂತನ ನಾಮಸ್ಮರಣೆಮಾಡುತ್ತಾ ಭಗವಂತನ ದರ್ಶನಕ್ಕಾಗಿ ಸರತಿಯಲ್ಲಿ ಕಾಯುತ್ತಾರೆ. ಸ್ವಯಂವ್ಯಕ್ತ ಕ್ಷೇತ್ರಗಳಾದ  ತಿರುಪತಿ, ಶ್ರೀಮೂಷ್ಣಂ, ಶ್ರೀರಂಗ, ಪಂಢರಪುರ ಮೊದಲಾದ ಕ್ಷೇತ್ರಗಳಿಗೆ ಹೋಗಿ ಮಹಾವಿಷ್ಣುವಿನ ದರ್ಶನಮಾಡಿದರೆ ಅಧಿಕ ಪುಣ್ಯ.

ನಾವೂ ಕೂಡಾ ಇಷ್ಟೆಲ್ಲ ಪುಣ್ಯಫಲಗಳನ್ನು ಕೊಡುವ ಡಿಸೆಂಬರ್ ೧೫, ೧೦೧೦ ವೈಕುಂಠ ಏಕಾದಶಿ ಉಪವಾಸ, ಭಗವದ್ಗೀತೆಯ ಪಾರಾಯಣ ಮತ್ತು ದೇವಸ್ಥಾನಗಳಲ್ಲಿ ಉತ್ತರ ದಿಕ್ಕಿನಲ್ಲಿ ನಿರ್ಮಿಸಿದ ವೈಕುಂಠ ದ್ವಾರದಮೂಲಕ ಮಹಾವಿಷ್ಣುವಿನ ದರ್ಶನವನ್ನು ಮಾಡಿ ಕಿಂಚಿತ್ ಪುಣ್ಯವನ್ನು ಗಳಿಸಿಕೊಳ್ಳೋಣ.

**ಶ್ರೀಕೃಷ್ಣಾರ್ಪಣಮಸ್ತು.**





# ದೇವೀರಮ್ಮನ ದೀಪಾವಳಿ

*ಪಲ್ಲವಿ ಮಂಜುನಾಥ್*

**ಚಿ**ಕ್ಕಮಗಳೂರು ಕಾಫಿಯ ನಾಡು, ಮಾತ್ರವಲ್ಲ ಪ್ರಕೃತಿ ಸೌಂದರ್ಯದ ತವರೂರು. ಕರ್ನಾಟಕದ ಅತ್ಯಂತ ಎತ್ತರ ಶಿಖರವಾದ ಮುಳ್ಳಯ್ಯನಗಿರಿ ಚಿಕ್ಕಮಗಳೂರಿನಲ್ಲಿದೆ. ಈ ಜಿಲ್ಲೆಯು ಬಹು ಮುಖ್ಯವಾದ ದೇವಸ್ಥಾನಗಳಿಗೆ ಹೆಸರು ವಾಸಿ : ಕಳಸದ - ಕಳಸೇಶ್ವರ, ಹೊರನಾಡು - ಅನ್ನಪೂರ್ಣೇಶ್ವರಿ, ಶೃಂಗೇರಿ - ಶಾರದಾಂಬೆ ಇನ್ನು ಹತ್ತು ಹಲವು. ಅದರಲ್ಲಿ ಬಿಂಡಿಗ - ದೇವಿರಮ್ಮನ ದೇವಾಲಯವು ಒಂದು.

ತಾಯಿಯ ಮೂಲ ವಿಗ್ರಹ ಬಿಂಡಿಗ ಗ್ರಾಮದಲ್ಲಿರುವ ಬೆಟ್ಟದಲ್ಲಿ ಇದೆ. ಅಮ್ಮನವರಿಗೆ ಬೆಟ್ಟದಲ್ಲಿ ವರುಷಕ್ಕೊಮ್ಮೆ  ಮಾತ್ರ ಪೂಜೆ, ಆ ವಿಶೇಷ  ಪೂಜೆ ನೆರವೇರುವುದು ದೀಪಾವಳಿಯ ಮೊದಲ ದಿನದಂದು. ಬೆಟ್ಟದ ಕೆಳಗಡೆ ಇರುವ ದೇವಸ್ಥಾನದಲ್ಲಿ ಪ್ರತಿ ನಿತ್ಯ ದೇವಿಗೆ ಪೂಜೆ ನಡೆಯುತ್ತದೆ ಮತ್ತು ಭಕ್ತಾದಿಗಳಿಗೆ ಅನ್ನಸಂತರ್ಪಣೆಯು ಇರುತ್ತದೆ. ದೀಪಾವಳಿಯ ಮೂರು ದಿನಗಳು ವಿಜೃಂಭಣೆಯ ಜಾತ್ರೆಯನ್ನು ಗ್ರಾಮಸ್ಥರು ನೆರವೇರಿಸುತ್ತಾರೆ. ಬೆಟ್ಟದಲ್ಲಿ ಮೂಲ ವಿಗ್ರಹಕ್ಕೆ ಅಭಿಷೇಕದ ನಂತರ ಬೆಳ್ಳಿ ಕವಚಗಳಿಂದ ಅಲಂಕರಿಸಿ ಭಕ್ತಾದಿಗಳ ದರುಶನಕ್ಕೆ ಅವಕಾಶ ಕಲ್ಪಿಸುತ್ತಾರೆ. ಮೊದಲ ದಿನದಂದು ಬೆಟ್ಟಕ್ಕೆ ಲಕ್ಷಾಂತರ ಜನ ಆಗಮಿಸುತ್ತಾರೆ, ಮಕ್ಕಳು - ವೃದ್ಧ ರಾದಿಯಾಗಿ ಕಡಿದಾದ  ಬೆಟ್ಟವನ್ನು ಭಕ್ತಿ ಭಾವದಿಂದ ಬರಿಗಾಲಿನಲ್ಲಿ ಬೆಳಗಿನ ಜಾವ ೧-೨ಗಂಟೆಗೆ ಹತ್ತಲು ಶುರುಮಾಡುತ್ತಾರೆ.ಕೆಲವರು ಹರಕೆ  ಎಂದು ಸೌದೆಗಳನ್ನು  ಹೊತ್ತಿಕೊಂಡು ಹತ್ತುತ್ತಾರೆ , ಇನ್ನು ಹಲವರು ತುಪ್ಪ, ಕುಪ್ಪಸ, ಹಣ್ಣು, ಕಾಯಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಬೆಟ್ಟ ಹತ್ತಿದ ನಂತರ ದೇವಿಯ ದರ್ಶನ ಮಾಡಿದಾಗ  ಸಿಗುವ ಧನ್ಯತಾಭಾವವನ್ನು  ಪದಗಳಲ್ಲಿ ವರ್ಣಿಸಲಸದಳ  ಮತ್ತು ಬೆಟ್ಟದ ಮೇಲಿನಿಂದ ಉದಯಿಸುವ ಸೂರ್ಯನನ್ನು ನೋಡುವುದು, ಪ್ರಕೃತಿ ಸೌಂದರ್ಯವನ್ನು ಸವಿಯುವ ಅನುಭವ ಸ್ವರ್ಗವನ್ನೆ ಕಂಡಂತೆ ಭಾಸವಾಗುತ್ತದೆ.

ಭಕ್ತರು ತೆಗೆದುಕೊಂಡು ಹೋದ ಸೌದೆ ಮತ್ತಿತರ ಸಾಮಗ್ರಿಗಳನ್ನು ಹತ್ತಿಸಿ ಸಂಜೆಯ ವೇಳೆಗೆ ದೀಪ ಬೆಳಗಿಸುತ್ತಾರೆ. ಈ ದೀಪವನ್ನು ನೋಡಿ



ಚಿಕ್ಕಮಗಳೂರು ಸುತ್ತ ಮುತ್ತಲಿನ ಗ್ರಾಮಸ್ಥರು ದೀಪಕ್ಕೆ ಆರತಿ ಬೆಳಗುತ್ತಾರೆ ಮತ್ತು ಹೆಣ್ಣುಮಕ್ಕಳು ಬೆಳಗಿನಿಂದ ಉಪವಾಸ  ಇದ್ದು , ಸಂಜೆವೇಳೆಗೆ ಜ್ಯೋತಿ ನೋಡಿದ ನಂತರ ತಮ್ಮ ಉಪವಾಸ  ತೀರಿಸಿಕೊಳುತ್ತಾರೆ. ಮೈಸೂರಿನ ಅರಸರು ಈ ಜ್ಯೋತಿಯನ್ನು ನೋಡಿ ಆರತಿ ಬೆಳಗಿ ದೀಪಾವಳಿ ಆಚರಿಸುತ್ತಿದ್ದರು  ಎಂಬ ಪ್ರತೀತಿ ಇದೆ . ಬೆಟ್ಟದ ಕೆಳಗಿನ ದೇವಸ್ಥಾನವನ್ನು ಜೀರ್ಣೋದ್ಧಾರ  ಮಾಡಿ, ಬಹಳ ಸುಂದರವಾಗಿ ನಿರ್ಮಿಸಿದ್ದಾರೆ. ಸಾಧ್ಯವಾದರೇ ಚಿಕ್ಕಮಗಳೂರು ನೋಡಲು ಹೋದವರು ಬಿಂಡಿಗ ದೇವೀರಮ್ಮ ದೇವಿಯ ದರ್ಶನ ಮಾಡಿ ಬನ್ನಿ

.





# ನನ್ನೊಂದಿಗೆ ನಿಂತ ನನ್ನ ಬೃಂದಾವನ ಕನ್ನಡ ಕೂಟ

*ಚಂದ್ರ*

ವರುಷ 2020 ಅಂತಿದ್ದಾಗೆ ನಮಗೆಲ್ಲ ನೆನಪಿಗೆ ಬರೋದು COVID-19 ಅನ್ನುವ ಮಹಾಮಾರಿ. ಇದು ನನಗಂತೂ ತುಂಬಾ ಭಯ ತಂದಿಟ್ಟ ರೋಗ. ಈ ತರಹದ ಸಾಂಕ್ರಮಿಕ ರೋಗದ ಬಗ್ಗೆ ನಾನು ಕೇವಲ ಓದಿ ಹಾಗು ಕೇಳಿ ತಿಳಿದಿದ್ದದ್ದು ಅಷ್ಟೆ. COVID-19 ಬಗ್ಗೆ ನೀವೆಲ್ಲಾ ತಿಳಿದಿರುವ ಹಾಗೆ, ರೋಗ ಹೊಸದು, ಮಾಹಿತಿ ಕಮ್ಮಿಯಾಗಿತ್ತು. ಇದು ಮತ್ತಷ್ಟು ಭಯ ತಂದಿತ್ತು ನನಗೆ. ಈ ಸಮಯದಲ್ಲಿ ನನ್ನೊಂದಿಗೆ ನಿಂತ್ತದ್ದು ನನ್ನ ಬೃಂದಾವನ ಕನ್ನಡ ಕೂಟ.




ನಾನು ಕಾದು ಕೂರುತಿದ್ದ ದಿನ ಅಂತ ಇದ್ದಿದ್ದರೇ ಅದು ರವಿವಾರ ಅಂದ್ರೆ ತಪ್ಪಾಗಲ್ಲಾ. ಬೃಂದಾವನ ಕನ್ನಡ ಕೂಟ ಹಮ್ಮಿಕೊಂಡ ಪ್ರತೀ ರವಿವಾರದ




ಕಾರ್ಯಕ್ರಮಗಳು ಬರೀ COVID-19 ಮಾಹಿತಿಗ ಮೀಸಲಾಗದೆ ಅನೇಕ ಮನರಂಜನೆ, ಆರೋಗ್ಯ ಮಾಹಿತಿವುಳ್ಳದ್ದಾಗಿ ಈ ಸಂಕಷ್ಟ ಪರಿಸ್ತಿತಿಯಲ್ಲಿ ಎಲ್ಲರನ್ನು ಜೊತೆಗಿರಿಸುವ ಕೆಲಸವನ್ನು ಬಹಳ ಯಶಸ್ವಿಯಾಗಿ ನಿರ್ವಹಿಸಿತು. ಪ್ರತೀ ವಾರ ಕಾರ್ಯಕ್ರಮದಲ್ಲಿ ಪಾಲುಗೋಳ್ತಿದ್ದ ನಾನು ಮತ್ತು ಕುಟುಂಬಕ್ಕೆ ಆತ್ಮಸ್ಥೈರ್ಯವನ್ನು ತರುತಿತ್ತು.

ಈ ನಿಟ್ಟಿನಲ್ಲಿ, ನಾನು ಹಾಗು ನನ್ನ ಕುಟುಂಬ,ಬೃಂದಾವನ ಕನ್ನಡ ಕೂಟಕ್ಕೆ ತುಂಬಾ ಧನ್ಯವಾದಗಳನ್ನು ಸಲ್ಲಿಸುವದರೊಂದಿಗೆ ಕೃತಘ್ನತಾ ಮನೊಭಾವನೆಯನ್ನೂ ಹೊಂದಿರುತ್ತೇವೆ.



# ಕನ್ನಡ ರಾಜ್ಯೋತ್ಸವದ ಸಂಭ್ರಮ - ೨೦೨೦

*ವೀಣಾ ದೇಸಾಯಿ*   "ಎಲ್ಲೇ ಇರು .. ಎಂತಾದರೂ ಇರು..  ಎಂದೆಂದಿಗೂ ನೀ ಕನ್ನಡವಾಗಿರು."  ಜೈ ಕರ್ನಾಟಕ

**ನಾ**ಡಹಬ್ಬ, ನಮ್ಮ ನಾಡಿನ ಹಬ್ಬಾ. ನಮ್ಮ ಕರ್ನಾಟಕ ರಾಜ್ಯೋತ್ಸವ.
ನಾ ಸಣ್ಣಾಕಿದ್ದಾಗ, ನಮ್ಮೂರು ಹಾನಗಲ್ ನಾಗ ಅಗದಿ ವಿಜೃಂಭಣೆಯಿಂದ ಆಚರಣೆ ಮಾಡತಿದ್ದ ಹಬ್ಬ ಇದು. ತಾಯಿ ಭುವನೇಶ್ವರಿಯ ದೊಡ್ಡ ಪಟ ಹಿಡಕೊಂಡು ಊರೆಲ್ಲಾ ಮೆರವಣಿಗಿ ಮಾಡತಿದ್ವಿ. ದಸರಾದ ಒಂಬತ್ತು ದಿನ, ಪ್ರತೀ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು. ಬ್ಯಾರೆ ಬ್ಯಾರೆ ಊರಿಂದ ಕಲಾವಿದರೆಲ್ಲಾ ಬಂದು ಕಾರ್ಯಕ್ರಮ ಕೊಡತಿದ್ರು. ಮತ್ತ ನಾವು ಅದ ಊರಿನವರಾಗಿ, ನಮ್ಮ ಡಾನ್ಸ್ ಇಲ್ಲದಿದ್ರ ಹೆಂಗ? ಹಿಂಗಾಗಿ ಪ್ರತಿ ವರ್ಷ ನಮ್ಮದೂ ಪ್ರೋಗ್ರಾಮ್ ಇರೋದೇ.

ಇನ್ನ , ಕೆನಡಾಕ್ಕ ಬಂದ ಮ್ಯಾಲೆ ಸಹಿತ, ಪ್ರತೀ ವರ್ಷ ನಾಡಹಬ್ಬಕ್ಕ ನಾನು ಏನಾರ ಒಂದ್ ಪ್ರೋಗ್ರಾಮ್ ಕೊಡತೀನಿ. ನಮ್ಮ ಎಲ್ಲಾ ದೋಸ್ತರಿಗೆ ನವೆಂಬರ್ ಬಂದ್ರ ಸಾಕು, ಅಗದೀ ಖುಷಿ.. ಈ ಹೊತ್ತಿಗೆ ಥಂಡಿ ಬ್ಯಾರೆ ಚಾಲೂ ಆಗತದ, ಹಿಂಗಾಗಿ ಪ್ರತಿ ವಾರ ಡಾನ್ಸ್ ಪ್ರಾಕ್ಟೀಸ್ ಅಂತ ಯಾರದರ ಮನ್ಯಾಗ ಸೇರೋದು ... ನಗು , ಹರಟೆ ಜೊತೆ ಒಬ್ಬೊಬ್ಬರು ಒಂದೊಂದು ಅಡಿಗಿ ಮಾಡಕೊಂಡು ಬಂದು ಪೊಟ್ಲಕ್ (potluck)  ಮಾಡೋದು. ಫುಲ್ ಮಸ್ತಿ ಮಾಡಿ ಒಂದು ಚೊಲೋ ಪ್ರೋಗ್ರಾಮ್ ಕೊಡತಿದ್ವಿ. ನಮಗೆಲ್ಲಾ ನಾವು ಕನ್ನಡದ ಜನ ಒಂದ ಕಡೆ ಸೇರೋದು, ಕನ್ನಡದಾಗ ಮಾತಾಡೋದು ಇದೇ ಒಂದು ದೊಡ್ಡ ಸಂಭ್ರಮ. ಹೊರನಾಡ ಕನ್ನಡಿಗರಾದ ನಮಗ, ಎಲ್ಲೆರ ಕನ್ನಡ ಭಾಷೆ ಕಿವಿಗೆ ಬಿದ್ರ ಸಾಕು, ಮೈಯೆಲ್ಲಾ ಕಿವಿಯಾಗಿ, ಯಾರಿವರು ಕನ್ನಡ ಮಾತಾಡೋರು ಅಂತ, ಅವರಿದ್ದಲ್ಲೇ ಹೋಗಿ ಮಾತಾಡಿಸ್ತೀವಿ.
"ಕನ್ನಡ ಎನೆ ಕುಣಿದಾಡುವದೆನ್ನದೆ ..... ಕನ್ನಡ ಎನೆ ಕಿವಿ ನಿಮಿರುವುದು ...... " ಎನ್ನುವ ಸಾಲುಗಳು ಅಕ್ಷರಸಃ ನಿಜವಾಗಿವೆ.

ಆದ್ರ, ಈ ವರ್ಷ ನಮ್ಮ ಸಂಭ್ರಮಕ್ಕ ಅಡ್ಡಿಯಾತು . ಏನ್ ಮಾಡೋದು.... ಈ ವರ್ಷದ ಕಥಿ ನಿಮಗೆಲ್ಲಾರಿಗೂ ಗೊತ್ತ ಅದ. ಯಾರ ಮನಿಗೂ ಒಬ್ಬರಿಗೊಬ್ಬರು ಹೋಗೋ ಹಂಗ ಇಲ್ಲಾ . ಎಲ್ಲಾರೂ ಒಟ್ಟಿಗೇ ಸೇರೋ ಹಂಗ ಇಲ್ಲಾ . ಹಿಂಗಾಗಿ ಅಗದೀ ಭಣ ಭಣ ಅನಸ್ಲಿಕ್ಕೆ ಶುರು ಆತು. ಏನ್ ಮಾಡೋಣ ಪಾ ... ಅಂತ ವಿಚಾರ ಮಾಡೋ ಹಂಗ ಆತು.

ಆವಾಗ ಹೊಳೆದಿದ್ದು, ಡಾನ್ಸ್ ವಿಡಿಯೋ ಪ್ಲಾನು. ನಮ್ಮ ನಮ್ಮ ಮನ್ಯಾಗಿಂದನ ವಿಡಿಯೋ ಮಾಡಿ, ಹೆಣಿಯೋ ವಿಚಾರ... ತಲ್ಯಾಗ ಈ ವಿಚಾರ ಬಂದದ್ದ ತಡ, ಕೆನಡಾದ ಕನ್ನಡತಿಯರು ಒಗ್ಗೂಡಿ (virtual ರೀ ಮತ್ತ ) ಹಾಡಿಗೆ ಹೆಜ್ಜಿ ಹಾಕೇ ಬಿಟ್ವಿ.  " ಕೇಳಿಸದೇ ಕಲ್ಲು ಕಲ್ಲಿನಲ್ಲಿ , ಕನ್ನಡ ನುಡಿ .." " ಇದೇ ನಾಡು , ಇದೇ ಭಾಷೆ , ಎಂದೆಂದೂ ನಮ್ಮದಾಗಿರಲಿ .. " , " ಕರುನಾಡ ತಾಯಿ ಸದಾ ಚಿನ್ಮಯೀ .." " ಬಾರಿಸು ಕನ್ನಡ ಡಿಂಡಿಮವ ..." ಈ ಹಾಡುಗಳನ್ನ ಸೇರಿಸಿ ಮಾಡಿದ ಹಾಡಿನ ಸಮೂಹಕ್ಕೆ , ನಮ್ಮ ರಾಜ್ಯೋತ್ಸವ ಸಂಭ್ರಮದ ನೃತ್ಯ ಸೇವೆ.

ಅತ್ಯಂತ ಪ್ರೀತಿಯಿಂದ ಮಾಡಿದ ಈ ವಿಡಿಯೋನ, ನಮ್ಮನ್ನ ಅಗಲಿದ ಶ್ರೀ S P ಬಾಲಸುಬ್ರಮಣ್ಯ ಅವರಿಗೆ ಸಮರ್ಪಿಸಿದ್ದೇವೆ.
ನವೆಂಬರ್ ೧ ರಂದು ಈ ವಿಡಿಯೋವನ್ನು ಕರ್ನಾಟಕದ ಹಲವಾರು ಕನ್ನಡ ಚಾನೆಲ್ ಗಳು ಟಿವಿಯಲ್ಲಿ ಪ್ರಸಾರ ಮಾಡಿದವು. ಸಾಮಾಜಿಕ ತಾಣಗಳಲ್ಲೂ ಕೂಡ ಭಾರಿ ವೈರಲ್ ಆಯಿತು. ಲೈಕು ಕಾಮೆಂಟು ಗಳ ಸುರಿಮಳೆ ಆಯಿತು . ಹೀಗೆ ನಮ್ಮ ಕರ್ನಾಟಕ ರಾಜ್ಯೋತ್ಸವ ಈ ವರ್ಷ ವರ್ಚುಯಲ್ ಆಚರಣೆ ಆದ್ರೂ ಸಹಿತ , ಎಲ್ಲರ ಜೊತೆಗೇ ಆಚರಿಸಿದಂತಾಯಿತು.




# ಕನ್ನಡ ರಾಜ್ಯೋತ್ಸವದ ಸಂಭ್ರಮ

*ನೀಲ್*

ನಾನು ಕೆನಡಾದ ಟೊರೊಂಟೋದಲ್ಲಿ ವಾಸವಾಗಿದ್ದೇನೆ. ಈ ವರ್ಷ ನಾನು ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಅನುಭವಿಸಿದೆ. ಅದನ್ನು ಇಲ್ಲಿ ವಿವರಿಸುತ್ತೇನೆ. ಟೀಚರ್ ಇದರ ಬಗ್ಗೆ ಹೇಳಿದರು, ಮತ್ತು ಕರ್ನಾಟಕದ ಬಗ್ಗೆ ಮಾತನಾಡುವ ಅವಕಾಶ ನೀಡಿದರು.  ಕರ್ನಾಟಕ ಅಂದರೆ ಕರು+ನಾಡು, ಎತ್ತರದ ಪ್ರದೇಶ ಮತ್ತು ಅಲ್ಲಿನ ಜಿಲ್ಲೆಗಳನ್ನು ತಿಳಿದೆ, ಕರ್ನಾಟಕ ರಾಜ್ಯೋತ್ಸವವನ್ನು ನವಂಬರ್ 1ರಂದು ಆಚರಿಸುತ್ತಾರೆ. ಕೆಂಪು ಮತ್ತು ಹಳದಿ ಕನ್ನಡ ಧ್ವಜವನ್ನು ಹಾರಿಸುತ್ತಾರೆ. ನಾಡಗೀತೆ ಹಾಡುತ್ತಾರೆ. ಕರ್ನಾಟಕದಲ್ಲಿ ಸಾಧಕರಿಗೆ ಪ್ರಶಸ್ತಿ ಕೊಡುತ್ತಾರೆ. ಇಲ್ಲಿ ನಮ್ಮ ಟೊರೊಂಟೊ ದಲ್ಲೂ ಕನ್ನಡ ರಾಜ್ಯೋತ್ಸವ ಆಚರಿಸಿದರು. ಮಾತೃಭಾಷೆ ಸ್ಪರ್ಧೆಗಳನ್ನು ನಡೆಸಿದರು ನಾನು ಭಾಗವಹಿಸಿ ಗೆದ್ದ ಸಂಭ್ರಮವೂ ಸಿಕ್ಕಿತು. ಇದೆಲ್ಲಾ ನನ್ನಲ್ಲಾದ ಈ ಬಾರಿಯ ಕನ್ನಡ ರಾಜ್ಯೋತ್ಸವ ಸಂಭ್ರಮ.





# ಪ್ರೀತಿಯ ಪರವಶತೆ

ಲಕ್ಷ್ಮಿ ಕೊಲಾಲ್



ಶಾಯಿಯಿಲ್ಲ ಲೇಖನಿಯಲ್ಲಿ ನಿನಗೆ ಪತ್ರ ಬರೆಯಲು
ಖಾಲಿಯಿಂದು ಭಾವನೆಗಳು ಮನದಲಿ ಪ್ರೀತಿ
ಉದಿಸಲು
ನಿನ್ನ ಹೆಸರು ಬಿತ್ತಿ  ನೆಲೆಸಿಹುದು..
ಹೃದಯದ ಧಮನಿ ಧಮನಿಗಳಲು
ಮರೆಯಲಾರೆ ನಿನ್ನ ನಾ ಪ್ರತಿ ಕ್ಷಣ ಕ್ಷಣದಲು  ...

ದೂರದಲ್ಲಿ ನಿಂತು ನಿನ್ನ ಕೊರಳ ಹಾರವಾಗುವೆ ..
ಭಾರವಾದ ಮನದಿ ಕೂಡಿ ಪ್ರೀತಿಯ
ಧಾರೆಯಾಗುವೆ .
ಹಸಿವೆಂಬ  ಬೆಂಕಿಯ ಶಮನಕ್ಕೆ ತುತ್ತ  ಮುತ್ತಾಗಿ
ನೀಡುವೆ..
ವಶವೆಂಬ ಉಯ್ಯಾಲೆಯಲಿ ಪರವಶಳಾಗಿ
ತೂಗುವೆ...

ನಲ್ಲ ನೀ ನಲ್ಲ ನನ್ನ ಸ್ವತ್ತು ..
ಇಂದು ನಿನ್ನ ಪಡೆಯಲು ...
ತಿಳಿದು ನೀಡಿರುವೆ ಈ ಪ್ರೀತಿಯನ್ನು ಎರವಲು .
ಸನಿಹ ಬಯಸುತಿಹುದು ನಿನ್ನ ಎಂದೆಂದೂ
ಸೇರಲು .
ಅನುರಾಗದ ಗೂಡಿನಲ್ಲಿ ಜೀವನಾಮೃತವ
ಸವಿಯಲು ..ಸವಿಯಲು ...ಸವಿಯಲು !!



# ನನ್ನೂರ ಸೊಬಗು

*ಮಂಜುಳ ಧನಂಜಯ್ - ಚಿಕ್ಕಮಗಳೂರು.*



**ಹಸಿರು ಸಿರಿಯ ಹಂದರ,**
**ಗಿರಿ ಶಿಖರಗಳ ಮಂದಿರ,**
**ಹರಿವ ತೊರೆಗಳ ಆಗರ,**
**ನೋಡ ಬನ್ನಿ ನನ್ನೂರ,**
**ಬೆಟ್ಟ ಗುಡ್ಡಗಳೇ ಗಿರಿ ಸಿರಿಗೆ ಕಾವಲು,**
**ಹೂವ ಅರಳಿಸಿ ಪಸರಿಸುವ ಕಾಫಿಯ ಘಮಲು,**
**ತೂಗಿ ಬಾಗುವ ತೆಂಗು ಕಂಗಿನ  ಬಯಲು,**
**ನಡುಬಳುಕಿಸಿ ಹರಿವ ತುಂಗ-ಭದ್ರೆಯ ಒಡಲು,**
**ಗಿರಿಯ ತಪ್ಪಲಿನಲ್ಲಿರುವ ಸೀತಾಳಯ್ಯ,**
**ನೆತ್ತಿ ಮೇಲೆ ನೆಲೆಸಿರುವ ಮುಳ್ಳಯ್ಯ,**
**ಪುಣ್ಯದರುಶನ ನೀಡುತಿರುವ ದತ್ತಾತ್ರೇಯ,**
**ನಿರಂತರ ಸುರಿಯುತ್ತಿರುವ ಮಾಣಿಕ್ಯಧಾರೆಯ,**
**ನೋಡ ಬನ್ನಿ ನನ್ನೂರ ಕಾಫಿಯ ಕನ್ಯೆಯ.**



# ಕವಿತೆಗಳು

*ಸತ್ಯ*

**"ಮನೆ ಎಂದರೇ ಇಷ್ಟೇನಾ"**

ನಾಲ್ಕು ಗೋಡೆಗಳ ನಡುವೆ
ನೆಲ ಮಾಡು ಕಿಟಕಿ ಬಾಗಿಲು
ಹಿಂದೆ ಹಿತ್ತಲು ಮುಂದೆ ಹೊಸ್ತಿಲು
ಬಳಸಿ ನಿಂತ ಕಾಂಪೌಂಡ್ ಸುತ್ತಲು
ಮನೆ ಎಂದರೆ ಇಷ್ಟೇನಾ!

ಮನೆ ಎಂದರೇ
ಬದುಕಿನಾ ಮಹದಾಸೆಯ ಪ್ರತೀಕ
ಶ್ರಮದ ಬೆವರ ಹನಿ ಹನಿಯ ದ್ಯೋತಕ
ಸಾಧನೆಯ ಸಂತೃಪ್ತಿಯ ನಿಜ ಸ್ವರೂಪ
ಧಣಿದ ಮೈ ಮನಕೆ ನೆಮ್ಮದಿಯ ತಲ್ಪ!

ಮನೆ ಎಂದರೇ
ಒಳ ದನಿಯ ಸ್ವಗತದಿ ಅರಹುವಾ ತಾಣ
ನೋವು ನಲಿವಿಲ್ಲಿ ಒಂದಾಗುವುದು ಕಾಣ
ಚಳಿ ಗಾಳಿ ಮಳೆ ಬಿಸಿಲಿನಲಿ ತಾ ನಿಂದು
ಆಶ್ರಯಿಸಿದವರ ತಲೆಕಾಯ್ವ ಬಂಧು!

ಮನೆ ಎಂದರೇ
ಹಂಗಿಲ್ಲದಾ ಬದುಕಿಗೆ ಭರವಸೆಯ ಬುನಾದಿ
ಗಂಜಿ ಕುಡಿದರೂ ನೆಲವೆ ಸುಖದ ಗಾದಿ
ಪ್ರೀತಿ ತುಂಬಿದ ಮನ ಒಳಗಿರಲದುವೆ ನಾಕ
ಅದರಂತ ನೆಲೆ ಇಲ್ಲ ಹುಡುಕಿದರು
ಮೂಲೋಕ!!





**"ಪುಟ್ಟ ಮಲ್ಲಿ ತುಂಬೆ ಹೂವೆ"**

ಪುಟ್ಟ ಮಲ್ಲಿ ತುಂಬೆ ಹೂವೆ
ಎಲ್ಲಿ ನೋಡಲಲ್ಲಿ ನಿನ್ನ ತಾವೆ
ನೀನು ನೋಡೆ ತುಂಬ ಸಣ್ಣ
ಶ್ವೇತ ವರ್ಣ ನಿನ್ನ ಬಣ್ಣ!

ನಂದಿ ಕಾಲು ನಿನ್ನ ರೂಪು
ಕಿರಿದಾದರೂ ಹಿರಿಯ ಛಾಪು
ನೀನೆಂದರೆ ಶಿವನಿಗಿಷ್ಟ
ನಿನ್ನ ಸ್ಥಾನ ಪರಮಶ್ರೇಷ್ಠ!

ಶೀತ ಶಮನಕ್ಕೆ ನೀ ರಾಮಬಾಣ
ನಿನ್ನ ಸೃಷ್ಟಿಗೆ ನೀತಿಯೊಂದು ಕಾರಣ
ಕಿರಿದೆಂದು ಕಡೆಗಣಿಸದಿರು ಮನುಜ
ಹಿರಿದು ಕಿರುದು ಸೃಷ್ಟಿಯಲಿ ಸಮ ಸಹಜ!!

**"ವಿರಹಿಸು ಮನವೇ ವಿರಹಿಸು"**

ಮೋಡ ಮುಸುಕಿದೆ ನಭಕೆ
ಮಬ್ಬು ಕವಿದಿದೆ ಮನಕೆ
ಸಂಜೆಯಾ ಬೇಸರವ ಸರಿಸಿ
ಜೊತೆಯಾಗು ಬಾ ಇನಿಯ ನೋವ ಮರೆಸಿ!

ಮುಳುಗಿಹನು ಬಾನು ರಂಗುಚೆಲ್ಲಿ
ನೀಲಾಕಾಶದಿ ತಾರೆಯಾ ರಂಗವಲ್ಲಿ
ಇಳೆಯ ಹೊದ್ದಿಹುದು ಶಶಿಯ ಕಾಂತಿ
ಇಂತಾದರೂ ಇಲ್ಲ ಈ ಮನಕೆ ಶಾಂತಿ!

ಬಾಗಿಲಾ ಬಳಿ ಕಾದಿರುವೆ ಕುಳಿತು
ನಿನ್ನ ನೆನಪಲ್ಲಿ ದೀಪ ಹಚ್ಚುವದನೇ ಮರೆತು
ನೀ ಬಳಿ ಬಂದರೆನಗದುವೇ ಬೆಳಕು
ಬಾ ಬೇಗ  ಇನಿಯ ಹಸನಾಗಿಸು ಬದುಕು!!



ಹೆಸರು - ಅನುಪಮ ಹೆಗ್ಡೆ

ಊರು - ಸ್ಯಾಕ್ರಮೆಂಟೊ,
ಅಮೇರಿಕಾ

## ಮನ......ಸ್ಸು

ಅವನಿಗೇಕೆ ತಿಳಿಯದು ನನ್ನ ಮನಸ್ಸಿನ ಆಳವೆಂದು
ನಾ ಕೊರಗಿದೆ ಹಲವು ದಿನ
ಒಲವು ತೋರಿ ಬಳಿ ಬಂದವರೆಲ್ಲ ತಿಳಿಯುವರು ನನ್ನ ಮನವೆಂದು
ನಾ ನಲಿದೆ ಬಹು ದಿನ
ನನಗೇ ಅರಿಯದ ಈ ನನ್ನ ಮನ ಯಾರೂ ಅರಿಯರೆಂದು
ನಾ ಕಳೆದ ದುಃಖದ ಕೆಲವು ದಿನ
ಕನಸು ಕಾಣುತ ಮರಳಿ ಹೊರಟಿತು ಈ ತಿಳಿಯದ ಪಯಣ
ಕಿರು ಕಿರಣದ ಕಡೆ !!

**ಅಂಪು**





# ಹಿಂದಿಯಿಂದ ಕನ್ನಡಕ್ಕೆ.....

ಯಶವಂತ್ ಗಡ್ಡಿ

## ಚೆಲುವೆಯ ಹಳ್ಳಿ

("**ಗೋರೀ ತೇರಾ ಗಾಂವ್ ಬಡಾ ಪ್ಯಾರ**"..
ಕನ್ನಡದಲ್ಲಿ)

ಚೆಲುವೆ, ನಿನ್ನ ಹಳ್ಳಿ ಅಂದಕೆ
ಮಾರುಹೋದೆ ಚೆಂದಕೆ,ಬಂದು ಇಲ್ಲಿಗೆ.
ಅದರಲೂ ನೀನು ಸರಳ ಸುಂದರ,
ಹೊಳೆದಂತೆ ಬಾಲಚಂದಿರ,ಹರೆಯದ ಬಾಲೆ!

ಹೃದಯದ ಬಯಕೆ,ನವಿಲಿನ ಪಾದಕೆ
ಗೆಜ್ಜೆಯ ತೊಡಿಸಲೆಂದು.
ಕುಹೂ ಕುಹೂ ಕೂಗುವ ಕೋಗಿಲೆಗೆ
ಹೂ-ಒಡವೆಯ ಹಾಕಬೇಕೆಂದು
ಇಲ್ಲಿಯೇ ಮನೆಯ ಮಾಡಲೆಂದು
ಹಕ್ಕಿಗಳ ಹಿಂಡು ಹುಲ್ಲನು ಆಯ್ದಿವೆ;ನೋಡು ಗರಿಕೆ ಆಯ್ದಿವೆ!

ರಂಗು ರಂಗಿನ ಹೂಗಳು ಅರಳಿವೆ,
ಜನರೂ ಹೂವಿನ ತರಹವೇ.
ಬಂದರೆ ಒಮ್ಮೆ ಯಾರೇ ಇಲ್ಲಿಗೆ
ತಿರುಗಿ ಹೋಗುವರಿನ್ನೆಲಿಗೆ.
ಧುಮ್ಮಿಕ್ಕಿ ಹರಿವ ಜಲಧಾರೆ,ಮಾಡಿದೆ ಮನಸೂರೆ..
ಎಲ್ಲಿದೆ ಈ ರೀತಿ;ಇನ್ನೆಲ್ಲಿದೆ ಈ ರೀತಿ!

ಪರಿಚಯವಿಲ್ಲದ ಪರನಾಡಿನವರನು
ಯಾರೂ ತನ್ನವರೆನ್ನರು.
ತೋರಿ ಪ್ರೀತಿಯನು ಜನುಮ ಜನುಮದ
ಬಂಧುಗಳಾದಿರಿ ನೀವೆಲ್ಲರೂ.
ಮನದಾನಂದವನು ಈ ಊರಿನ
ಜನರು ತೋರುತಾರೆ ನುಡಿದು
ಹೃದಯದ ಮಾತು;ಹೃದಯದ ಮಾತು!

## ನಿನ್ನ ನಯನಗಳು!

(ಹಿಂದಿ ಚಲನಚಿತ್ರಗೀತೆ,'**ತೇರಿ ಆಂಖೋ ಕೆ ಸಿವಾ**'
ದ ಭಾವಾನುವಾದ)
ಚಿತ್ರ: ಚಿರಾಗ್;ಗಾಯಕರು: ಮಹಮ್ಮದ್ ರಫಿ ಸಾಹೇಬ್

ನಿನ್ನ ನಯನಗಳಲ್ಲದೆ ಈ ಭೂಮಿಯ ಮೇಲೆ ಏನಿದೆ!
ಕಣ್ತೆರೆಯಲು ಬೆಳಗು,ಕಣ್ಮುಚ್ಚಿರೆ ಇರುಳು
ನನ್ನ ಜೀವನ,ಮರಣಗಳು ಈ ಕಣ್ಣೆವೆಯಲ್ಲಿಯೇ!

ಕಣ್ಣೆವೆಗಳ ಓಣಿಯಲಿ ವಸಂತವದನದ ನಗು ತುಂಬಿದೆ
ನನ್ನ ಕನಸಿನ ನಗರಗಳೆಲ್ಲಾ ಈ ಕಣ್ಣಲ್ಲೇ ಮನೆ ಮಾಡಿವೆ
ಈ ಕಣ್ದೆರೆ ಬೆಳಗು,ಮುಚ್ಚಿರೆ ಇರುಳಾಗಿದೆ
ನನ್ನ ಜೀವನ,ಮರಣಗಳು ಈ ಕಣ್ಣೆವೆಯಲ್ಲಿಯೇ!

ನನ್ನ ಮುಂದಿನ ದಿನಗಳ ಭಾವಚಿತ್ರದ ರೂಪು ಈ ಕಣ್ಣಲ್ಲಿದೆ
ಕಾಮನೆಯ ಕಾಡಿಗೆಯಲಿ ತೀಡಿರುವ ಅದೃಷ್ಟವೇ ಆಗಿದೆ
ಈ ಕಣ್ದೆರೆ ಬೆಳಗು,ಕಣ್ಮುಚ್ಚಿರೆ ಇರುಳು
ನನ್ನ ಜೀವನ,ಮರಣಗಳು ಈ ಕಣ್ಣೆವೆಯಲ್ಲಿಯೇ!

ಎಲ್ಲಿದ್ದರೂ ಈ ಕಂಗಳು,ಇವುಗಳ ನೆರಳೆನ್ನ ಎದೆತುಂಬಿದೆ
ಎಲ್ಲಿ ನೋಡಿದರಲ್ಲಿ ಇವುಗಳಲ್ಲದೆ ಬೇರೇನೂ ಕಾಣದಾಗಿದೆ
ಈ ಕಣ್ದೆರೆ ಬೆಳಗು,ಕಣ್ಮುಚ್ಚಿರೆ ಇರುಳು
ನನ್ನ ಜೀವನ,ಮರಣಗಳು ಈ ಕಣ್ಣೆವೆಯಲ್ಲಿಯೇ!

## ಇಳೆಯ ಒಲವು!

("ನೀಲೆ ಗಗನ್ ಕೆ ತಲೆ" ಹಿಂದಿ
ಚಿತ್ರಗೀತೆಯ ಕನ್ನಡ ಭಾವಾನುವಾದ)
ಗಾಯಕರು: ಮಹೇಂದ್ರ ಕಪೂರ್)

ಹೇ ನೀಲಾಕಾಶದ ಕೆಳಗೆ
ಇಳೆಯ ಒಲವು ಅರಳಿದೆ
ಬರುತವೀ ಜಗಕೆ ರವಿಯ ಬೆಳಕು,
ಇರುಳಲಿ ಶಶಿ ಹೊಳಪು!

ಹಿಮಮುತ್ತಿನ ಮಣಿ
ಸುಮದಲಿ ಹರಡಿ
ಏರಿದೆ ಸೌಂದರ್ಯ!

ರೆಂಬೆ ಕೊಂಬೆ
ಆಲಿಂಗನದಿ
ತೂಗಾಡಿರೆ ಮರದಿ!

ನದಿಗಳು ಝರಿಗಳ
ಕೂಡಿ ಓಡಿವೆ
ಸಾಗರದ ಕಡೆಗೆ!





# ಅಲೂಗಡ್ಡೆ ಮೊಸರು ಬಜ್ಜಿ/ ಗೊಜ್ಜು

ಶ್ರೀವಿದ್ಯಾ ಪ್ರಶಾಂತ್

**ಬೇಕಾಗುವ ಸಾಮಾಗ್ರಿಗಳು:**

- ಬೇಯಿಸಿ ಸಿಪ್ಪೆ ತೆಗೆದ ಅಲೂಗಡ್ಡೆ-೨
- ಮೊಸರು - ೧/೨ ಲೋಟ
- ಇಂಗು- ೧/೪ ಚಮಚ
- ಸಣ್ಣಗೆ ಹೆಚ್ಚಿದ ಹಸಿಮೆಣಸು- ೨
- ಸಣ್ಣಗೆ ಹೆಚ್ಚಿದ- ಶುಂಠಿ
- ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು
- ಸಣ್ಣಗೆ ಹೆಚ್ಚಿದ ಈರುಳ್ಳಿ (ಬೇಕಿದ್ದಲ್ಲಿ ಮಾತ್ರ)
- ಉಪ್ಪು- ರುಚಿಗೆ ತಕ್ಕಷ್ಟು

**ವಗ್ಗರಣೆಗೆ:**

- ಸಾಸಿವೆ-೧/೨ ಚಮಚ
- ಉದ್ದಿನ ಬೇಳೆ- ೧/೪ ಚಮಚ
- ಕೆಂಪು ವಣ ಮೆಣಸು-೧
- ಕರಿಬೇವಿನ ಸೊಪ್ಪು-೪-೫

**ಮಾಡುವ ವಿಧಾನ:**

ಮೊದಲಿಗೆ ಒಂದು ತಳವಿರುವ ಪಾತ್ರೆಯಲ್ಲಿ ಬೇಯಿಸಿ ಸಿಪ್ಪೆತೆಗೆದ ೨ ಅಲೂಗಡ್ಡೆಗಳನ್ನು ತೆಗೆದುಕೊಳ್ಳಿ. ಅದಕ್ಕೆ ಮೇಲೆ ತಿಳಿಸಿದ ಪ್ರಮಾಣದಷ್ಟು ಮೊಸರು, ಹಸಿಮೆಣಸು, ಶುಂಠಿ, ಇಂಗು, ಉಪ್ಪು, ಈರುಳ್ಳಿ( ಬೇಕಿದ್ದಲ್ಲಿ ಮಾತ್ರ) ಎಲ್ಲವನ್ನೂ ಸೇರಿಸಿ ಚೆನ್ನಾಗಿ ಹಿಚುಕಿ ನಂತರ ಕೊತ್ತಂಬರಿ ಸೊಪ್ಪನ್ನು ಸೇರಿಸಿ..ಈಗ ರುಚಿಯನ್ನು ಹೆಚ್ಚಿಸಲು ಕೊನೆಯದಾಗಿ ವಗ್ಗರಣೆಯನ್ನೂ ಹಾಕಿ.

ಅಲೂಗಡ್ಡೆ ಮೊಸರು ಬಜ್ಜಿ/ಗೊಜ್ಜು ಬಿಸಿ ಅನ್ನದ ಜೊತೆ ಸವಿಯಲು ಸಿದ್ಧ.





# ಸಾಬೂದಾನ/ಸಬ್ಬಕ್ಕಿ/ಸೀಮೆ ಅಕ್ಕಿ ವಡೆ

*ಸುರಭಿ ಜಿ ಯಸ್*

**ಬೇಕಾಗುವ ಸಾಮಗ್ರಿಗಳು :**

- 1 CUP ಸೀಮೆ ಅಕ್ಕಿ ಬದನೆ / ಬ್ಯೆಂಗನ್ 3
- ¼ CUP ಮೊಸರು (ಹುಳಿ ಮೊಸರು ಇದ್ದರೆ ಉತ್ತಮ)
- ಹೆಚ್ಚಿದ ಕರಿಬೇವಿನ ಸೊಪ್ಪು (ಹತ್ತು ಎಲೆಗಳು)
- ಕೊತ್ತಂಬರಿ ಸೊಪ್ಪು
- ಶುಂಠಿ ಚೂರುಗಳು (ಸ್ವಲ್ಪ)
- ಹಸಿ ಮೆಣಸಿನಕಾಯಿ (4-5)
- ಉಪ್ಪು (ರುಚಿಗೆ ತಕ್ಕಷ್ಟು)
- ಅಕ್ಕಿಹಿಟ್ಟು (2-3 ಚಮಚ)
- ಕರಿಯಲು ಎಣ್ಣೆ






**ಮಾಡುವ ವಿಧಾನ..**

ಮೊದಲು ಪಾತ್ರೆಗೆ 1 CUP ಸೀಮೆ ಅಕ್ಕಿಯನ್ನು ಹಾಕಿ ತೊಳೆಯಿರಿ. ನಂತರ ಅದಕ್ಕೆ ಮೊಸರು ಹಾಕಿ ಸ್ವಲ್ಪ ನೀರು ಹಾಕಿ 1 ಗಂಟೆ ವರೆಗೂ ನೆನೆಯಲು ಬಿಡಿ. 1 ಗಂಟೆಯ ನಂತರ ಸಾಬೂದಾನದ ಮಿಶ್ರಣಕ್ಕೆ ಹೆಚ್ಚಿದ ಕರಿಬೇವಿನ ಸೊಪ್ಪು, ಕೊತ್ತಂಬರಿ ಸೊಪ್ಪು, ಶುಂಠಿ ಚೂರುಗಳು, ಹಸಿ ಮೆಣಸಿನಕಾಯಿ, ಉಪ್ಪು ಹಾಕಿ ಕಲಸಿ.

ಹಿಟ್ಟು ಗಟ್ಟಿಯಾದರೆ ಅದಕ್ಕೆ ಸ್ವಲ್ಪ ನೀರು ಸೇರಿಸಿ ವಡೆ ಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಿ. ನಂತರ ಈ ಮಿಶ್ರಣಕ್ಕೆ 2 ಚಮಚ ಅಕ್ಕಿ ಹಿಟ್ಟನ್ನು ಸೇರಿಸಿಕೊಳ್ಳಿ. ಅಕ್ಕಿಹಿಟ್ಟು ಹಾಕುವುದರಿಂದ ಸಬ್ಬಕ್ಕಿ ವಡೆಗಳು ಹಗುರವಾಗಿ ಬರುತ್ತವೆ. ನಂತರ ಎಣ್ಣೆ ಕಾಯಿಸಿಕೊಳ್ಳಿ. ಈ ಮಿಶ್ರಣವನ್ನು ಉಂಡೆಗಾತ್ರ ಮಾಡಿ ಮಧ್ಯಕ್ಕೆ ತಟ್ಟಿ ಬಾಣಲೆಯಲ್ಲಿ ಹಾಕಿ ಕಂದು ಬಣ್ಣ ಬರುವವರೆಗೂ ಕರಿಯಿರಿ.

ಈಗ ಸಾಬೂದಾನ ವಡೆಗಳು ಸವಿಯಲು ಸಿದ್ಧ.



# ಚಿಣ್ಣರ ಚಿತ್ರ









ದಿಯಾ ರಜನೀಶ





ವಿನೀತ್ ಎಸ್



# ಚಿಣ್ಣರ ಚಿತ್ರ









ಶೈಲೇಶ್ ಎಸ್





ಅಕ್ಷರ ಭಾರ್ಗವ






ನಾವಿಷ್ಕಾ





ನಿಹಾನ್ ಕಿರಣ್ ಕುಮಾರ್





ಸಾರ್ಥಕ್ ರಾವ್





ಅನ್ವಿತಾ ಪ್ರಶಾಂತ್







ಉಮಾ ಲಕ್ಷ್ಮೀಶನ್



## ಛಾಯಾಗ್ರಹಣ

ರಾಜು ಮುತ್ತು





## ಛಾಯಾಗ್ರಹಣ

ರಜನೀಶ ಶ್ರೀನಿವಾಸ





# ಛಾಯಾಗ್ರಹಣ

ಮಂಜುನಾಥ್ ಶಂಕರ್









# ಛಾಯಾಗ್ರಹಣ

ಉಷಾ ಬಸ್ರೂರ್







